# ಅಪರಂಜಿ

ತಿಳಿನಗೆಯ ಕಾರಂಜಿ



**ಬೆಳ್ಳಿ ಹಬ್ಬದ ವರ್ಷ**

**ಮಾರ್ಚ್ - 2008**





ನಾನು ಡಾಕ್ಟರು, ಯಾವ ಪದಕ್ಕಾದ್ರೂ ‘ಎಕ್ಸ್ಪಮಿ’
ಅಂತ ಸೇರ್ಸೋ ಅಧಿಕಾರ ನನಗಿದೆ

ಬಿಡಿ ಪ್ರತಿ: ರೂ 10.00

# ಅಪರಂಜಿ

ತಿಳಿನಗೆಯ ಕಾರಂಜಿ





ಸಂಪುಟ 25
ಸಂಚಿಕೆ - 6
ಮಾರ್ಚ್ - 2008



**ಚಂದಾ ವಿವರ:**
ಬಿಡಿ ಪ್ರತಿ: ರೂ. 10/-
ವಾರ್ಷಿಕ ಚಂದಾ: ರೂ. 100/-
ಹತ್ತು ವರ್ಷದ ಚಂದಾ: ರೂ. 750/-
ಕೆಲಸದ ವೇಳೆ:
ಬೆಳಿಗ್ಗೆ 8 ರಿಂದ 10 ಗಂಟೆಯವರೆಗೆ
*ಮುದ್ರಣ:* ರವಿ ಗ್ರಾಫಿಕ್ಸ್
*ಅಕ್ಷರ ಜೋಡಣೆ:*
ಒಮೇಗಾ ಲೇಸರ್ ಟೆಕ್

## *ಈ ಸಂಚಿಕೆಯಲ್ಲಿ .....*



*ಪ್ರಕಾಶಕರು:* ಕೊರವಂಜಿ ಅಪರಂಜಿ ಟ್ರಸ್ಟ್, 36, 6ನೇ ಮುಖ್ಯರಸ್ತೆ, ಮಲ್ಲೇಶ್ವರಂ, ಬೆಂಗಳೂರು - 560 003. email: aparanji@hotmail.com website: aparanjimag.com

*ಸಂಪರ್ಕ ವಿಳಾಸ:* ಶ್ರೀ ಬೇಲೂರು ರಾಮಮೂರ್ತಿ, ಉಪ ಸಂಪಾದಕರು, ಅಪರಂಜಿ ಮಾಸಪತ್ರಿಕೆ, ನಂ. 96, 'ಸುಕೇಶವ' ಎರಡನೇ ಅಡ್ಡರಸ್ತೆ, 20ನೇ ಮುಖ್ಯರಸ್ತೆ, ಮೊದಲನೇ ಫೇಸ್, ಬಿ.ಟಿ.ಎಂ. ಲೇಔಟ್, ಬೆಂಗಳೂರು - 560 068. ದೂರವಾಣಿ: 808-26688488. email: brmurthy@dataone.in




ಂ ಪ್ರಕಾಶ್

ಎಲ್ಲ ವರ್ಗದವರಿಗೂ ವಕೀಲರ ಸೇವೆ ಕೈಗೆಟುಕಲಿ – ಹೇಳಿಕೆ

● ವಕೀಲರ ಸೇವೆ ಬೇಡದೇ ಇರುವುದೇ ಕ್ಷೇಮ !!

★★★

"ಸಮಾಜದಲ್ಲಿ ಅರ್ಚಕರಿಗೆ ಗೌರವ ಉಳಿದಿಲ್ಲ" – ಹೇಳಿಕೆ

● ದೇವರು ನಡುಗಿದನಂತೆ !!

★★★

'ರೈಲ್ವೆ ನೇಮಕಾತಿಯಲ್ಲಿ ಕನ್ನಡಿಗರಿಗೆ ಅನ್ಯಾಯವಾಗಿಲ್ಲ' – ಸಚಿವ ವೇಲು ಅವರು

● ಅವರು ರೈಲು ಬಿಡುತ್ತಿದ್ದಾರೇನು ??

★★★

ಬೊಕ್ಕಸ ಲೂಟಿ ಮಾಡಿದ ಬಿ.ಜೆ.ಪಿ – ಜೆ.ಡಿ.ಎಸ್; ನಿರುದ್ಯೋಗಿಗಳಿಗೆ ಭತ್ಯೆ; ಖರ್ಗೆ ಆಶ್ವಾಸನೆ – ಸುದ್ದಿ

● ಅಪರಂಜಿ ಚಕಿತಳಾದಳಂತೆ !!

★★★

ನಕಲಿ ವಾಟರ್ ಫಿಲ್ಟರ್ ಮಾರಾಟ; ಒಬ್ಬನ ಬಂಧನ – ಬೆಂಗಳೂರು ಸುದ್ದಿ

● ಇದರಿಂದ ನೀರಾ – **worry** ಅಂತೂ ಖಚಿತ !!

★★★

"ವಿದ್ಯಾರ್ಥಿ ಜೀವನ ಶ್ರೇಷ್ಠ" – ಹೇಳಿಕೆ

● ಹೌದು, ಈಗಲಂತೂ ಹಾಗೇ ತೋರುತ್ತೆ !!


★★★

ಸೇನಾಪಡೆ ಸಮಾರಂಭದಲ್ಲಿ ಶ್ರೀ ಶ್ರೀ ರವಿಶಂಕರ್ ಭಾಗವಹಿಸಿದ್ದನ್ನು ಕೇಳಿ ಅಪರಂಜಿ ನಸುನಕ್ಕಳಂತೆ !!

★★★

"ಆಶ್ರಮದ ಸುತ್ತ ನಿಷೇಧಾಜ್ಞೆ" ಆಹಾ!!

★★★



# ನನ್ನ ದೃಷ್ಟಿಯಲ್ಲಿ ಉತ್ತಮ ಹಾಸ್ಯಸಾಹಿತ್ಯ

**- ಕು.ಗೋ.**

ಗಳಗನಾಥರ ಕಾದಂಬರಿಗಳ ಕುರಿತು ಮಹಾ ಪ್ರಬಂಧ ಬರೆದು 'ಡಾಕ್ಟರ್' ರಾದವರು ಶ್ರೀ ಕೃಷ್ಣಮೂರ್ತಿ ಕಿತ್ತೂರ ಅವರು. 'ಹಂಬಲ', ನಿರೀಕ್ಷಣೆ, ಕರ್ಣಧುರ್ಯೋಧನೀಯಂ, ಕೆಲವು ವಿಮರ್ಶಾ ಗ್ರಂಥಗಳು ಇವರಿಂದ ರಚಿತವಾಗಿದ್ದರೂ ಇವರಿಗೆ ಹೆಚ್ಚಿನ ಜನಪ್ರಿಯತೆ ಹಾಗೂ ಕೀರ್ತಿಯನ್ನು ತಂದುಕೊಟ್ಟ ಕೃತಿ ಇವರ ಲಲಿತ ಪ್ರಬಂಧಗಳ ಸಂಕಲನ 'ಜೀವನ ಸಂಧ್ಯಾ'. ಸುಮಾರು ಇಪ್ಪತ್ತು ಪ್ರಬಂಧಗಳ ಈ ಸಂಕಲನ ವಿನೋದ ಪ್ರಶಸ್ತಿಯನ್ನೂ, ಸಾಹಿತ್ಯ ಅಕಾಡೆಮಿಯ ಪ್ರಶಸ್ತಿಯನ್ನೂ ಬಾಚಿಕೊಂಡಿದೆ.

ಜೀವನ ಸಂಧ್ಯಾ ಕೇವಲ ಹಾಸ್ಯಕ್ಕೆ ಮೀಸಲಿಟ್ಟ ಕೃತಿ ಎಂದರೆ ತಪ್ಪಾದೀತು. ಹಿತಮಿತವಾದ ಹಾಸ್ಯದೊಂದಿಗೆ ವಿಕಟವಿಲ್ಲದ ವಿನೋದ, ಆಡಂಬರವಿಲ್ಲದ ವಿಡಂಬನೆ, ಸ್ವಪ್ರತಿಷ್ಠೆಗೇರದ ಆತ್ಮರತಿ, ಸಲುಗೆಗಿಳಿಯದ ಆಪ್ತತೆ, ನಿಯಮ ಮೀರದ ಬುದ್ಧಿವಾದ, ಅತಿ ಎನಿಸದ ವಿಕ್ಷಿಪ್ತತನ, ಪಾಂಡಿತ್ಯ ಮೆರೆಯದ ವಿಷಯ ಸಂಗ್ರಹ, ಕಾವ್ಯಮಯವಾಗದ ಕಲ್ಪಕತೆ ಈ ಗುಣಗಳಿಂದಾಗಿ ಅವರ ಶೈಲಿ ಅನನ್ಯವೆನಿಸುತ್ತದೆ. ಇವು ಕಿತ್ತೂರರ ಬರಹದ ಬಗ್ಗೆ ಜಿ.ಎಸ್. ಆಮೂರರ ಪ್ರಶಂಸಾ ನುಡಿಗಳು.

ಗೊರೂರು, ಮೂರ್ತಿರಾಯರು, ರಾಕು ಅವರ ಸಾಲಿಗೆ ಸೇರಬಹುದಾದವರು ಕಿತ್ತೂರರು. ಅಪರಂಜಿ ಓದುಗರಿಗಾಗಿ ನಾನು ಆರಿಸಿದ ಪ್ರಬಂಧ ಜೀವನ ಸಂಧ್ಯಾ ವೃದ್ಧಾಪ್ಯದ ಸುಖವನ್ನು ಸೊಗಸಾಗಿ ವರ್ಣಿಸಿದ್ದಾರೆ. ಕಿತ್ತೂರರು ಇಲ್ಲಿ ಎಲ್ಲವನ್ನೂ ಸಹ್ಯವಾಗಿಸಿದ್ದಾರೆ. ಜೀವನ ಪ್ರೀತಿಯನ್ನು ಹಾಸ್ಯಪ್ರಜ್ಞೆಯನ್ನು ಮೆರೆದಿದ್ದಾರೆ. ಹೋಮಿಯೋಪತಿ ವೈದ್ಯರಾಗಿಯೂ 'ಪ್ರಾಕ್ಟೀಸ್' ಮಾಡುತ್ತಿರುವ ಕಿತ್ತೂರರು ಸಂಗೀತ ಪ್ರೇಮಿಕೂಡಾ. ಲೋಹಿಯಾ ಪ್ರಕಾಶನದ ಸಿ. ಚನ್ನಬಸವಣ್ಣನವರಲ್ಲಿ ವಿಚಾರಿಸಿದಾಗ 'ಜೀವನ ಸಂಧ್ಯಾ' ಪುಸ್ತಕದ ಎಲ್ಲ ಪ್ರತಿಗಳೂ ಮಾರಾಟವಾಗಿವೆಯೆಂದು ತಿಳಿದು ಬಂತು. ಇದು ಎರಡನೇ ಆವೃತ್ತಿಯನ್ನು ಕಾಣಬೇಕಾದ್ದು ಅವಶ್ಯ ಎನಿಸುತ್ತದೆ.

# ಜೀವನಸಂಧ್ಯಾ

**- ಕೃಷ್ಣಮೂರ್ತಿ ಕಿತ್ತೂರ**

ಮಕ್ಕಳ ದಿನಾಚರಣೆ, ಹುತಾತ್ಮರ ದಿನಾಚರಣೆಗಳಂಥ ದಿನಾಚರಣೆಗಳು ಒಂದೆಬಿದ್ದು, ಕೆಲಕಾಲ ಸಪ್ತಾಹ ಮಾಸಾಚರಣೆಗಳೂ ನಡೆದವು. ಈಗಂತೂ ವರ್ಷಾಚರಣೆಗಳು ಫ್ಯಾಶನ್ ಬಂದಿವೆ. ಮೊನ್ನೆ ಮೊನ್ನೆ ಮಹಿಳೆಯರ ವರ್ಷಾಚರಣೆ ಮುಗಿದು ಈಗ ವೃದ್ಧರ ವರ್ಷಾಚರಣೆ ನಡೆದಿದೆ. ಇನ್ನು ಮುಂದೆ ವಿಧವೆಯರ, ವಿಧುರರ, ಸೋಡಚೀಟಿಯವರ (ಡೈವೋರ್ಸಿಗಳ) ವರ್ಷಾಚರಣೆಗಳೂ ಬರಬಹುದು. ಬರಲಿ, ಯಾಕೆ-ಬರಬಾರದು?

ಈ ವರ್ಷದುದ್ದಕ್ಕೂ ರೇಡಿಯೋ, ಟಿ.ವಿ., ಪತ್ರಿಕೆ ಮೊದಲಾದ ಮಾಧ್ಯಮಗಳಲ್ಲಿ ವೃದ್ಧರ ಕೌಟುಂಬಿಕ ಸಾಮಾಜಿಕ ಆರ್ಥಿಕ ವೈದ್ಯಕೀಯ ಮಾನಸಿಕ ಮೊದಲಾದ ಸಮಸ್ಯೆಗಳನ್ನು ಕುರಿತು ಚರ್ಚೆ ನಡೆದೇ ನಡೆಯಿತು. ಆದರೆ ಹೀಗೆ ಮಾಡಿದ್ದರಿಂದ ಏನು ಪ್ರಯೋಜನವೋ ನನಗಂತೂ ಅರ್ಥವಾಗುವುದಿಲ್ಲ. ನನ್ನನ್ನು ಕೇಳಿದರೆ ಇಂಥ ವರ್ಷಾಚರಣೆಗಳಿಂದ ಅವರ ಸಮಸ್ಯೆಗಳನ್ನು ಹೆಚ್ಚಿಸಿದಂತೆಯೇ ಆಗುತ್ತದೆ. ಪಾಪ, ಅವರು ತಮ್ಮ ರೋಗವನ್ನು ಚಿಂತೆಯನ್ನು ಏಕಾಂಗಿತನವನ್ನು ಮರೆತು ಅಥವಾ ಅವುಗಳ ಜೊತೆಗೆ ಹೇಗೋ Compromise ಮಾಡಿಕೊಂಡು ಬದುಕುತ್ತಿದ್ದರು. ಈ ವರ್ಷಾಚರಣೆಯಿಂದ ಅವರಿಗೆ ಮತ್ತೆ ಅವರ ತೊಂದರೆಗಳನ್ನು ನೆನಪು ಮಾಡಿಕೊಟ್ಟು ಗಾಯದ ಮೇಲೆ ಉಪ್ಪು ಎರಚಿದಂತಾಯಿತು.

ದೊಡ್ಡ ದೊಡ್ಡ ಹುದ್ದೆಗಳಲ್ಲಿ ಕೆಲಸ ಮಾಡಿ ಕೈತುಂಬ ಸಂಬಳ, ಮನೆತುಂಬ ಗಿಂಬಳ ಪಡೆಯುತ್ತ, ಮುಖಸ್ತುತಿಯ ಮೇಣೆಯಲ್ಲಿ ಮೆರೆದವರಿಗಂತೂ ನಿವೃತ್ತಿಯೆಂಬುದು ದೊಡ್ಡ ಶಿಕ್ಷೆಯಾಗಿ ತೋರುತ್ತದೆ. ಇಂಥವರಿಗೆ ನಿವೃತ್ತಿಯಾದ ಮರುದಿನವೇ ಮುಪ್ಪು ಆವರಿಸಿಬಿಡುತ್ತದೆ. ಏಕಾಕಿತನ, ಖಾಲಿಖಾಲಿಭಾವ, ಮೂಲೆಗುಂಪಾದ ಅನುಭವ ಅವರನ್ನು ಹಣ್ಣು ಮಾಡಿಬಿಡುತ್ತದೆ. Sample survey ಮಾಡುವ ಹುಚ್ಚು ಈಗೀಗ ಶುರುವಾಗಿದೆಯಷ್ಟೇ. ತುಂಬಾ ಬಿಝಿಯಾದ ಇಂಥ ಒಬ್ಬ ಸುಪ್ರಸಿದ್ಧ ಸಂಖ್ಯಾಶಾಸ್ತ್ರಜ್ಞನ ಪ್ರಕಾರ, ಇಂಥವರಿಗೆ ನಿವೃತ್ತಿಯಾದ ಒಂದು ವರ್ಷದಲ್ಲಿ ಮರಣದ ಕುತ್ತು ಹೆಚ್ಚಂತೆ! ಆ ಕುತ್ತು ದಾಟಿದರೆ ಇವರು ಮುಂದೆ ನಿರ್ಜರರೋ ಅಮರರೋ ಆಗಬಹುದಂತೆ. ಇವನ ಈ ಅಂದಾಜನ್ನು ನಂಬುವುದೂ ಬಿಡುವುದೂ ನಿಮಗೇ ಬಿಟ್ಟದ್ದು.

ಇಷ್ಟು ಮಾತ್ರ ನಿಜ. ಮುದುಕನಾಗುವುದಕ್ಕಿಂತ ಮುದುಕನಾಗುತ್ತಿದ್ದೇನೆ ಎಂಬ ಕಲ್ಪನೆಯೇ ಭಯಾನಕವಾಗಿರುತ್ತದೆ. ಇಂಥವರನ್ನು ನೀವು ಎಲ್ಲ ಕಡೆಗೂ ನೋಡಬಹುದು. ದಿನಕ್ಕೆ ಎರಡೆರೆಡು ಸಲ ದಾಡಿ ಮಾಡಿಕೊಳ್ಳುವವರಿದ್ದಾರೆ. ತಲೆಗೂದಲಿಗಲ್ಲದೆ ಹುಬ್ಬು ಮೀಸೆಗಳಿಗೂ ಕರಿಯ ಬಣ್ಣ ಬಳಿದುಕೊಳ್ಳುವವರಿದ್ದಾರೆ. ಕೆಲವರಂತೂ ಸುಕ್ಕುಗಟ್ಟಿದ ಮುಖಕ್ಕೆ plastic surgery ಮಾಡಿಸಿಕೊಂಡು, ಬೋಳು ತಲೆಗೆ 'ವಿಗ್' ಹಾಕಿಕೊಂಡು ತರುಣರಂತೆ ಕಾಣಬಯಸುತ್ತಾರೆ. ಈ ಹುಚ್ಚು ಗಂಡಸರಿಗೆ ಮಾತ್ರ ಸೀಮಿತವಾಗಿಲ್ಲ. ತುಟಿಗೆ

ಲಿಪ್‌ಸ್ಟಿಕ್ಕು, ಮುಖಕ್ಕೆ ಬಣ್ಣ, ತಲೆಗೆ 'ಬಾಬ್‌ಕಟ್' ಮಾಡಿಸಿಕೊಂಡು, ಸಲ್ವಾರ್-ಕಮೀಜ ಧರಿಸಿ ಕೃತಕ-ನಗೆ ಸೂಸುವ ಮುದಿಮಹಿಳೆಯರಂತೂ ಹಾಸ್ಯಾಸ್ಪದವಾಗಿ ಕಾಣುತ್ತಾರೆ. ಇಂಥವರನ್ನು ಕಂಡರೆ ನನಗೆ ಒಂದು ಬಗೆಯ ಮರುಕ ಬರುತ್ತದೆ.

ಈ ಎಲ್ಲ ಮುಖವಾಡ ಹಾಕುವದು ಒಂದು ರೀತಿಯ ಮಾನಸಿಕ ದೌರ್ಬಲ್ಯ. ಇದರಿಂದ 'ಕಾಸ್ಮೆಟಿಕ್' ಉದ್ಯಮ ಮಾತ್ರ ಬೆಳೆಯುತ್ತದೆ. ಮುದುಕರ ಮುಪ್ಪನ್ನು ಮಾತ್ರ - ಸ್ಕ್ಯಾಮುಗಳನ್ನು ಮುಚ್ಚಿಹಾಕುವಂತೆ-ಮುಚ್ಚಲಿಕ್ಕೆ ಸಾಧ್ಯವಿಲ್ಲ. ವಿಚಿತ್ರವೆಂದರೆ ಮುದುಕರಂತೆ ಕಾಣುವುದು ಇವರಿಗೆ ಬೇಡವಾದರೂ, ಸೀನಿಯರ್ ಸಿಟಿಝನ್ ಎಂದು ಬಸ್ಸು-ರೈಲುಗಳಲ್ಲಿ ಸಿಗುವ ಟಿಕೀಟು ದರದಲ್ಲಿಯ ರಿಯಾಯತಿ, ಇನ್‌ಕಂ ಟ್ಯಾಕ್ಸ್, ಟೆಲಿಫೋನ್ ಬಿಲ್ಲುಗಳಲ್ಲಿಯ ರಿಯಾಯಿತಿಗಳು ಮಾತ್ರ ಈ ಕೃತಕ ದಂತಧಾರಿಗಳಿಗೆ ಬೇಕೇ ಬೇಕು! ವಯಸ್ಸಾದರೂ ಅಜ್ಜ ಎಂದೋ 'ಮುತ್ಯಾ' ಎಂದೋ ಕರೆಯಿಸಿಕೊಳ್ಳಲು ಇವರಿಗೆ ನಾಚಿಕೆ ಬರುತ್ತದೆ, ಪಾಪ!

ಬಾಲ್ಯ ಯೌವ್ವನಗಳಂತೆ ಮುಪ್ಪು ಕೂಡ ಒಂದು ಅವಸ್ಥೆ. ಆದರೆ ಬಹುಜನರು ಮುಪ್ಪು ಒಂದು ಶಾಪವೆಂದೇ ತಿಳಿಯುತ್ತಾರೆ. ಮುಪ್ಪಿಗೆ ಹೆದರಿ ಏನೂ ಪ್ರಯೋಜನವಿಲ್ಲ. ಅದನ್ನು ಬಂದಂತೆ ಸ್ವೀಕರಿಸುವುದೇ ಜಾಣತನ. ಹಾಗೆ ನೋಡಿದರೆ Every age has its pains and pleasures. ನೀವೇ ನೋಡಿರಿ: ಅಭ್ಯಾಸದ ಒತ್ತಡ, ಹಿರಿಯರ ಬಂಧನಗಳು ಯಾವಾಗ ಕಳೆದಾವೋ ಎನ್ನುವ ಮಕ್ಕಳು, ಬಾಲ್ಯ ಕಳೆದುಹೋದ ನಂತರವೇ "ಆಗ ಎಂಥ ಆನಂದವಿತ್ತು" ಎಂದು ಪರಿತಪಿಸುವುದಿಲ್ಲವೆ? ಹಾಗೆಯೇ ಎಲ್ಲಾ ಅವಸ್ಥೆಗಳು. ನನ್ನನ್ನು ಕೇಳಿದರೆ ಬಾಲ್ಯದ ಕಿರಿಕಿರಿ, ತಾರುಣ್ಯದ ಜವಾಬ್ದಾರಿಗಳೆಲ್ಲ ಕಳೆದ ಮೇಲೆ ಬರುವ ವೃದ್ಧಾಪ್ಯವೇ ನಿಜವಾದ ಆನಂದದ ಕಾಲ. ಮುಪ್ಪಿಗೆ ಹೆದರಿ "ಮುಪ್ಪು ಬಹಳ ಕಷ್ಟದ ಕಾಲ" ಎಂದು ಹೇಳುವವರು, ಮುಪ್ಪಿನ ಅನುಭವವಿಲ್ಲದ ಎಳೆ ನಿಂಬೆಕಾಯಿಗಳು! ನಿಜವಾಗಿ ವಿಚಾರ ಮಾಡಿ ನೋಡಿದರೆ ವೃದ್ಧಾಪ್ಯವೇ ನಿಜವಾದ ಆನಂದದ ಕಾಲ, ಅದು ಜೀವನದ Golden Period! ಜೀವನಾನುಭವದಿಂದ ಮಾಗಿರುವ ವೃದ್ಧಾಪ್ಯವು ತುಂಬಿದ ಕೊಡ ಇದ್ದಂತೆ, ಮಾಗಿದ ಮಾವಿನ ಹಣ್ಣು ಇದ್ದಂತೆ.

ನೀವು ಮಾವಿನಕಾಯಿಯ ಮೂರು ರೂಪಗಳನ್ನು ನೆನಪು ಮಾಡಿಕೊಳ್ಳಿರಿ. ಮಿಡಿಗಾಯಿಯ ಒಗರೂ ನಾಲಿಗೆಗೆ ರುಚಿಯೇ; ಕಾಫಿಯ ಕಹಿ ರುಚಿಯಾದಂತೆ ಮಿಡಿಯ ಒಗರೂ ನಾಲಿಗೆಗೆ ರುಚಿ. ಬಲಿತ ಕಾಯಿಯ ಹುಳಿಯಂತೂ ನಾಲಿಗೆಗೆ ನೀರನ್ನೇ ತರಿಸುವುದು. ಕಾಯಿಯ ಹುಳಿ ಹೆಚ್ಚಿದಷ್ಟು ಅದರ ಉಪ್ಪಿನಕಾಯಿಯ ರುಚಿ ಹೆಚ್ಚಂತೆ. ಅತಿ ಹುಳಿಯಾದ ಕಾಯಿಗೆ ಬೊಗಸೆ ಬೊಗಸೆ ಉಪ್ಪು ಮತ್ತು ಕೆಂಪುಕೆಂಪಾದ ಖಾರಪುಡಿಯನ್ನು ಹಾಕಿ ತಯಾರಿಸಿದ ಉಪ್ಪಿನಕಾಯಿ ಇನ್ನೂ ರುಚಿ. ಸೇರುಸೇರು ಎಣ್ಣೆಯ ಒಗ್ಗರಣೆ ಹಾಕಿದ ಆಂಧ್ರದ ಉಪ್ಪಿನಕಾಯಿಯ ರಸ ಇದ್ದರೆ, ಭೀಮಸೇನನಂತೆ ಬಂಡಿ ಅನ್ನವನ್ನೇ ಉಂಡು ತೇಗಬಹುದು! ಇದೆಲ್ಲ ನಿಜವಾದರೂ ಆ ಒಗರು, ಆ ಹುಳಿ ಎಲ್ಲಾ ಕಳೆದುಹೋಗಿ ಕಳಿತು ಹಣ್ಣಾದಾಗ ಮಾವಿನ ಮಾಧುರ್ಯ ಅನುಪಮ!

ಮಾವಿನಹಣ್ಣಿನ ರುಚಿ ಸವಿದು ಅನುಭವಿಸಿದವರಿಗೆ ಉಪ್ಪು ಹುಳಿ ಖಾರ

ಖೇದವಾಗುತ್ತದೆ. ನನ್ನನ್ನೇ ನೋಡಿರಿ, ಒಂದು ಕಾಲಕ್ಕೆ ನನಗೆ ಅತ್ಯಂತ ಪ್ರಿಯವಾಗಿದ್ದ ಉಳ್ಳಾಗಡ್ಡಿ ಬಜ್ಜಿ ವಡಾ, ದೋಸೆಗಳನ್ನು ಕಂಡರೇ ಈಗ ಒಂದು ರೀತಿಯ ಮಳಮಳ-Nausea-ಆರಂಭವಾಗುತ್ತದೆ. ನಮ್ಮ ಅಜ್ಜಿ ನನ್ನನ್ನು 'ಬುರಬುರಿ ಬಾಜಿರಾಯ' ಎಂದೇ ಕರೆಯುತ್ತಿದ್ದಳು. ಈಗ ನಾನು ಭೇಟಿಯಾದವರಿಗೆಲ್ಲ "ಕರಿದ ಪದಾರ್ಥ ದೇಹಕ್ಕೆ ಒಳ್ಳೆಯದಲ್ಲ, ಹಣ್ಣುಹಂಪಲು, ಹಸಿ ತರಕಾರಿ, ಸೊಪ್ಪಿನ ಪಲ್ಯಗಳನ್ನು ಹೆಚ್ಚು ತಿನ್ನಿರಿ" ಎಂದು ಹೇಳುತ್ತೇನೆ. ನಾನಂತೂ ಕಂಡಕಂಡ ಹಸಿ ತೊಪ್ಪಲದಿಂದ ಅರ್ಧ ಹೊಟ್ಟೆಯನ್ನೇ ತುಂಬಿಸಿಕೊಳ್ಳುತ್ತಿದ್ದೇನೆ.

ನನ್ನ ನಾಲಿಗೆಗೆ ಬುದ್ಧಿ ಬಂದಂತೆ, ಕೆಲವು ವೃದ್ಧರ ಕಣ್ಣು ಕಿವಿ ಮೂಗುಗಳಿಗೆ ಬುದ್ಧಿ ಬಂದಿರುತ್ತದೆ. ಆ ವೃದ್ಧರು ಎಂಥ ಪುಣ್ಯವಂತರು! ಕಮರಿನ ವಾಸನೆ ಕೆಟ್ಟದ್ದೆಂದು ಇವರ ಮೂಗು ತಿಳಿದುಕೊಂಡುಬಿಟ್ಟಿದೆ. ಅದಕ್ಕೆ ಮನೆಯವರು ಕದ್ದುಮುಚ್ಚಿ ಕರಿದುಕೊಂಡು ತಿಂದ ಚಕ್ಕುಲಿ ಕೋಡಬಳೆಗಳ ಸುದ್ದಿ ಇವರಿಗೆ ತಿಳಿಯುವುದೇ ಇಲ್ಲ; ಮನಕ್ಕೆ ಕಿರಿಕಿರಿಯೂ ಆಗುವುದಿಲ್ಲ. ಮಡದಿಯ ಕಿಟಿಕಿಟಿಯನ್ನು ಜೀವನದುದ್ದಕ್ಕೂ ಕೇಳಿ ಕೇಳಿ ಕಿವುಡಾದ ಇವರ ಕಿವಿಗಳಿಗೆ ಈಗ ಮಗ-ಸೊಸೆ ತನ್ನನ್ನು ಆಡಿಕೊಳ್ಳುವದು ಕೇಳಿಸುವುದೇ ಇಲ್ಲ. ಎಂಥ ಭಾಗ್ಯ! ಜೀವನದಲ್ಲಿ ಅವಶ್ಯವಾಗಿ ಬೇಕಾಗಿರುವ ಶಾಂತಿ-ಸಮಾಧಾನಗಳು ಎಷ್ಟು ಸುಲಭವಾಗಿ ಸಿಕ್ಕುಬಿಡುತ್ತವೆ! ನನ್ನ ಕೆಲವು ವೃದ್ಧ ಮಿತ್ರರಂತೂ ಸಕ್ಕರೆ ಹಾಕಿದ ಚಹ ಕುಡಿಯುವುದನ್ನೇ ತ್ಯಜಿಸಿಬಿಟ್ಟಿದ್ದಾರೆ. ಹೀಗೆ ಉಳಿತಾಯವಾದ ಸಕ್ಕರೆಯನ್ನು export ಮಾಡಿ ನಮ್ಮ ಸರಕಾರ ಬಿಲಿಯನ್‌ಗಟ್ಟಲೆ ಡಾಲರುಗಳನ್ನು ಗಳಿಸಬಹುದು! ನಾನೂ ಕೂಡ ಉಪ್ಪು ತಿನ್ನುವುದನ್ನು ಬಿಟ್ಟು ನನ್ನ ಅಳಿಲು ದೇಶಸೇವೆಯನ್ನು ಮಾಡಿದ್ದೇನೆ. ಅಷ್ಟೇ ಅಲ್ಲ, ಇಂದಿಲ್ಲ ನಾಳೆ ಸಕ್ಕರೆಯನ್ನೂ ತ್ಯಾಗಮಾಡುವ ಸಿದ್ಧತೆಯಲ್ಲಿರುವಂತೆ ನನ್ನ ನಾಲಿಗೆಗೆ ಈಗಾಗಲೇ ಸೂಚನೆ ಕೊಟ್ಟುಬಿಟ್ಟಿದ್ದೇನೆ.

ಆದರೆ ಕೆಲವು ದುರ್ದೈವಿ ವೃದ್ಧರ ಪಂಚೇಂದ್ರಿಯಗಳೂ ಪಕ್ಕಾ ಜಾಗೃತವಾಗಿರುತ್ತದೆ. ಪಾಪ, ಅವರ ಜೀವನವೇ ಅನುಕಂಪನೀಯ. ಇಂಥ ಮುದುಕರು walking ನೆವ ಮಾಡಿಕೊಂಡು ಗುಡಿಗುಂಡಾರದಲ್ಲೋ ಗಾರ್ಡ್‌ನ್‌ನಲ್ಲೋ ಸಭೆ ಸೇರಿ ಮನೆಯಲ್ಲಿಯ ರಗಳೆಯನ್ನೆಲ್ಲ ಬಿಚ್ಚುತ್ತಾರೆ. ಮಗ-ಸೊಸೆ-ಮೊಮ್ಮಕ್ಕಳ ಅಗೌರವದ ಮಾತುಕೃತಿಗಳಿಗೆ ಉಪ್ಪುಖಾರ ಹಚ್ಚಿ ವರ್ಣಿಸುವದೇ ಅವರ 'ಟೈಮ್‌ಪಾಸ್' ಆಗಿರುತ್ತದೆ. ಇನ್ನು ಕೆಲವರು ಕೇವಲ ತಮ್ಮ ಜಡ್ಡು-ಜಾಪತ್ತು-ಔಷಧ-ಉಪಚಾರ-ವೈದ್ಯರ ಬಿಲ್ಲುಗಳ ಮಾತೇ ಆಡುವರು. ಮತ್ತೆ ಕೆಲವರು ಸದಾಕಾಲ ನಿರಾಶಾವಾದದ ತಮ್ಮ ತತ್ವಜ್ಞಾನವನ್ನೇ ಕೊರೆಯುವರು. ನೀವೇನಾದರೂ ಇಂಥ ವೃದ್ಧವೃಂದದ ನುಡಿಮುತ್ತುಗಳನ್ನು ಕೇಳಿದರೆ ನಿಮಗೆ ನನ್ನ ಮಾತಿನ ಮನವರಿಕೆಯಾಗುವದು. ಇಂಥವರ ಕಂಪನಿ avoid ಮಾಡಲಿಕ್ಕೆಂದೇ ನಾನೀಗ ವಾಕಿಂಗ್ ಹೋಗುವುದನ್ನು ಬಿಟ್ಟುಬಿಟ್ಟಿದ್ದೇನೆ. ಆದರೆ ನನ್ನ ಶ್ರೀಮತಿ ಮಾತ್ರ ನನ್ನ ಮಾತನ್ನು ನಂಬುವುದಿಲ್ಲ. ಯಾಕೆಂದರೆ ವಾಕಿಂಗ್ ತಪ್ಪಿಸಲಿಕ್ಕೆ ನಾನು ಏನೇನೋ ಕುಂಟು ನೆವಗಳನ್ನು ಹುಡುಕುತ್ತೇನೆ ಎಂಬುದನ್ನು ಅವಳು ಈಗ ತಿಳಿದುಕೊಂಡುಬಿಟ್ಟಿದ್ದಾಳೆ.

ಅದೇನೇ ಇದ್ದರೂ ಇಂಥ ವೃದ್ಧರ ಕಂಪನಿ avoid ಮಾಡುವುದೇ ನಮ್ಮ ಮಾನಸಿಕ ಆರೋಗ್ಯಕ್ಕೆ ಹಿತಕರ. ಮುಪ್ಪು ಅನಿವಾರ್ಯ ನಿಜ; ಆದರೆ ಅದು ಅಸಹನೀಯವಲ್ಲ. ಅದನ್ನು ಸಹ್ಯವಾಗಿ ಮಾಡಿಕೊಳ್ಳುವದು ನಮ್ಮ ಕೈಯಲ್ಲೇ ಇದೆ. "ನಾನು ನಿರುಪಯುಕ್ತ, ಭೂಮಿಗೆ ಭಾರ, ತ್ಯಾಜ್ಯ, ನನ್ನನ್ನು ಯಾರೂ ಸೇರುವುದಿಲ್ಲ" ಎಂಬಂಥ negative ವಿಚಾರಗಳನ್ನು ಬಿಟ್ಟು ಮನೆಯಲ್ಲಿ ಸಮಾಜದಲ್ಲಿ ಹೊಂದಿಕೊಂಡು ಬದುಕಲು ಕಲಿಯಬೇಕು. ಅಂದರೆ ಈ ಜೀವನದ ಸಂಧ್ಯಾಕಾಲ ಸುಖಕರವಾದೀತು.

ಸಾಯಂಕಾಲದ ಸೂರ್ಯನ ಬಿಸಿಲಿನಲ್ಲಿ ಪ್ರಖರತೆ ಇಲ್ಲವಾದರೂ ಆಹ್ಲಾದಕರವಾದ ಹೊಂಬೆಳಕು ಇದ್ದೇ ಇದೆಯಲ್ಲವೆ?


"Senile Dementia"ವನ್ನು ಹುಚ್ಚುಮುಪ್ಪು ಎನ್ನುವದೂ, ಅರವತ್ತರ ಅರಳುಮರಳು ಎನ್ನುವದೂ ರೂಢಿಯಲ್ಲಿದೆ. ಕೆಲವರು ಅರವತ್ತು ಎಂದರೆ "ಮರಳಿ ಅರಳುವದು" ಎನ್ನುವರು. ಹಾಗೆ ನೋಡಿದರೆ ಅರವತ್ತಕ್ಕೇ ಜೀವನವು ಅರಳುವದು. ಆ ಮೊದಲಿನದೆಲ್ಲ ಬರೀ ಹಸೀಮುಗುಳು ಅಥವಾ ಬಿರಿಮುಗುಳು, ಅಷ್ಟೇ.

ಅರಳಿದ ಹೂವಿನಂತೆ ವೃದ್ಧಾಪ್ಯ ಸಹಜಸುಂದರ!

Sigmond Freud ಹೇಳಿದಂತೆ, "It is all in our mind."

# ಪಚ್ಚೆ ಕಲ್ಲಿನ ಪವಾಡ

- ಶಿವು



ಊರೆಲ್ಲಾ ಸುತ್ತಾಡಿ ಮಧ್ಯಾಹ್ನ ಮನೆಗೆ ಬಂದು ಟೀ ಕುಡೀತಾ ಕೂತಿದ್ದೆ. ಶರಲೇಖ ಈಸೀಛೇರಿನ ಮೇಲೆ ಹಾಗೇ ಒರಗಿದ್ದ. ಪಾಪ, ಅವನಿಗೆ ರೆಸ್ಟ್ ಸಿಗೋದೇ ಕಷ್ಟ ನಿದ್ದೆ ಮಾಡಿದರೆ ಮಾಡಲಿ ಅಂದುಕೊಂಡು ನಾನು ಅವನನ್ನ ಡಿಸ್ಟರ್ಬ್ ಮಾಡಲಿಲ್ಲ. ಒಮ್ಮೆಲೇ ಅವ ಕಣ್ಣುಬಿಟ್ಟು

'ನಿಜ, ನಮ್ಮ ದೇಶದಲ್ಲಿ ಈ ಲಂಚ ಅನ್ನೋದು ಯಾವಾಗ ನಿಲ್ಲುತ್ತೋ?' ಅಂತ ಉದ್ಗರಿಸಿದ.

'ಹೌದು ಶರಲೇಖ, ನಾನೂ ಅದನ್ನೇ ಯೋಚಿಸ್ತಾ ಇದ್ದೆ' ಅಂದೆ. ತಕ್ಷಣ ಜ್ಞಾನೋದಯವಾಯಿತು. ಅವನು ನನ್ನ ಆಲೋಚನೆಯ ಒಳಹೊಕ್ಕು ಮಾತನಾಡಿದ್ದ. 'ಅರೆ, ನಾನು ಲಂಚದ ಬಗ್ಗೆ ಯೋಚಿಸ್ತಾ ಇದ್ದದ್ದು ನಿನಗೆ ಹೇಗೆ ತಿಳೀತೋ ಮಾರಾಯಾ?' ಅಂತ ಕುತೂಹಲದಿಂದ ಕೇಳಿದೆ.

'ಲಾಜಿಕಲ್ಲಾಗಿ ಇವೆಲ್ಲಾ ಬಹು ಸುಲಭ ವತ್ಸನ, ನೀನು ಇವತ್ತು ಮಧ್ಯಾಹ್ನ ಕೋಟೆ ವೆಂಕಟರಮಣಸ್ವಾಮಿ ಗುಡೀಗೆ ಹೋಗಿ ಕದಂಬಂ ತಿಂದದ್ದೂ ಸಹಾ ಈ ಲಾಜಿಕಲ್ ಪ್ರಕ್ರಿಯೆ ಗುಂಪಿಗೇ ಸೇರುತ್ತೆ.' ಅಂದ ಶರಲೇಖ.

'ಒಂದು ಸಮಸ್ಯೆಗೆ ವಿವರಣೆ ಕೇಳಿದ್ರೆ ಇನ್ನೊಂದು ಸಮಸ್ಯೆ ಒಡ್ಡೋದು ಶಿಷ್ಟಾಚಾರ ಅಲ್ಲ ತಿಳ್ಕೋ' ಸ್ವಲ್ಪ ಖಾರವಾಗಿಯೇ ಹೇಳಿದೆ, ನಮಗೂ ಸ್ವಾಭಿಮಾನ ಇರುಲ್ವೇ.

'ಸಾರಿ, ಕ್ಷಮ್ಸು ಪಾಯಿಂಟ್ ವೆಲ್ ಟೇಕನ್. ಬಿಡಿಸಿ ಹೇಳ್ತೀನಿ, ಕೇಳು. ಮೊದಲಿಗೆ ಲಂಚದ ವಿಷಯ. ನೀನು ಟೀ ಕುಡೀತಾ ಕೂತಿದ್ದಾಗ ಟೀ ಕಪ್ ಹಿಡಿದಿದ್ದ ಎಡಗೈ ಹೆಬ್ಬೆರಳಿನ ಮೇಲೆ ನೀಲಿ ಬಣ್ಣದ ಶಾಯಿ ಹರಡಿದ್ದು ಕಣ್ಣಿಗೆ ಬಿತ್ತು. ಮೊನ್ನೆ ನಿನ್ನ ತಂಗೀ ಮಗ ನಿಶಿತ್ ಹತ್ರ ನೀನು ಮಾತಾಡ್ತಾ ಇದ್ದಾಗ ಅವನ ಫ್ಲಾಟಿನ ರಿಜಿಸ್ಟ್ರೇಷನ್‌ಗೆ ಸಾಕ್ಷಿಯಾಗಿ ನಿನ್ನನ್ನೂ ಕರೀತಾ ಇದ್ದದ್ದು ಕೇಳಿಸಿತ್ತು. ಅಂದಮೇಲೆ ಇವತ್ತೇ ನೀನು ರಿಜಿಸ್ಟ್ರೇಷನ್ ಕೆಲಸಕ್ಕೆ ಅವನೊಂದಿಗೆ ಹೋಗಿದ್ದೆ ಅಂತ ನಿರ್ಧರಿಸಿದೆ, ಲಾಜಿಕಲ್ ತಾನೇ.'

'ಹೌದು, ಒಪ್ದೆ.'

'ರಿಜಿಸ್ಟ್ರೇಷನ್ ಅಂದಮೇಲೆ ಸಬ್‌ರೆಜಿಸ್ಟ್ರಾರ್ ಕಛೇರೀಗೆ ಹೋಗ್ಲೇ ಬೇಕು ತಾನೆ. ಅಲ್ಲಿ ಲಂಚಾಸುರನ ಆಟಾಟೋಪ ಎಷ್ಟಿರುತ್ತೇ ಅಂತ ನಿನಗೇ ಗೊತ್ತು. ಈ ಲಂಚ ಅಂದ್ರೆ ನಿನಗೆ ಮೈಯ್ಯೆಲ್ಲಾ ಉರಿಯುತ್ತೆ ಅಂತ ನನಗೆ ಮೊದಲಿನಿಂದ ಗೊತ್ತಿರೋದ್ರಿಂದ ಅಲ್ಲಿಂದ ಹಿಂತಿರುಗಿದ ಮೇಲೆ ನೀನು ಆ ಗುಂಗಿನಲ್ಲೇ ಇರ್ತೀಯ ಅನ್ನೋದೂ ಖಂಡಿತ. ಹಾಗಾಗಿ ನೀನು ಟೀ ಕುಡೀತಾ ಕೂತಾಗ ನಿನ್ನ ಆಲೋಚನೇನ ಪ್ರವೇಶಿಸಿದೆ ಅಷ್ಟೇ.'

'ಎಷ್ಟು ಸಿಂಪಲ್ಲು ಶರಲೇಖ. ಇಷ್ಟೂ ತಿಳೀದೇ ಹೋಯ್ತಲ್ಲಾ ನನಗೆ. ಅದ್ಸರಿ, ಈ ದೇವಸ್ಥಾನದ ವಿಷ್ಯ?'

'ರಿಜಿಸ್ಟ್ರೇಶನ್ ಆದಮೇಲೆ ಪಾಪ ಕಳೆದುಕೊಳ್ಳೋಕ್ಕೆ ಅಂತ ಯಾವುದೋ ದೇವಸ್ಥಾನಕ್ಕೆ ಹೋಗಿದ್ದೆ ನೀನು ಅಂತ ನಿನ್ನ ಬಲಕಿವೀ ಮೇಲೆ ಸಿಕ್ಕಿಸಿರೋ ಹೂವಿನಿಂದ ನಿರ್ಧರಿಸ್ದೆ. ಕೋಟೆ ವೆಂಕಟರಮಣಸ್ವಾಮಿ ಗುಡೀಲಿ ಇವತ್ತು ಕದಂಬಂ ಪ್ರಸಾದ ಇರುತ್ತೆ ಅನ್ನೋದು ಅನುಭವದಿಂದ ಬಂದ ಜ್ಞಾನ. ಆ ಪ್ರಸಾದ ತಿಂದೋರ ಮುಖದಲ್ಲಿ ಒಂದು ಸಂತೃಪ್ತಿಯ ಖಳೆ ಇರುತ್ತೆ. ಆ ಖಳೆ ನಿನ್ನ ಮುಖದ ಮೇಲಿತ್ತು. ಅಷ್ಟೇನೋಡು ನನ್ನ ಲಾಜಿಕ್ಕಿನ ಮರ್ಮ. ಅಂದಹಾಗೆ ನಮ್ಮಣ್ಣ ಮಕರಧ್ವಜ ಫೋನ್ ಮಾಡಿದ್ದ. ಯಾವುದೋ ತುರ್ತು ಕೆಲಸದ ಮೇಲೆ ಇಲ್ಲಿಗೆ ಬರ್ತಾನಂತೆ' ಅಂದ ಶರಲೇಖ.

ಅವನು ಮಾತು ಮುಗಿಸುಕ್ಕಿಲ್ಲ, ಬಾಗಿಲ ಕರೆಗಂಟೆ, ಮಕರಧ್ವಜನ ಬರವನ್ನು ಸೂಚಿಸಿತು. ಬೇಗ ಹೋಗಿ ಬಾಗಿಲು ತೆರೆದೆ. ಮಕರಧ್ವಜ ತನ್ನೊಂದಿಗೆ ಅರ್ಚಕರೊಬ್ಬರನ್ನು ಕರೆತಂದಿದ್ದ. 'ಇವರು ನರಸಿಂಹ ಶಾಸ್ತ್ರಿಗಳು ಚುರಚುರುಕನ ಹಳ್ಳಿಯ ಚನ್ನಕೇಶವ ದೇವಸ್ಥಾನದಲ್ಲಿ ಪ್ರಧಾನ ಅರ್ಚಕರು. ಪಾಪ, ಬೆಳ್ಳಂಬೆಳಗ್ಗೆ ಓಡಿಬಂದಿದ್ದಾರೆ. ಗರ್ಭಗುಡಿಯಲ್ಲಿದ್ದ ಪಚ್ಚೆಕಲ್ಲಿನ ಕಿರೀಟ ಕಳುವಾಗಿದೆಯಂತೆ. ನಮ್ಮೂರಿನೋರೇ ಆಗಿರೋದ್ರಿಂದ ಪತ್ತೆ ಹಚ್ಚುಕ್ಕೆ ಏನಾದ್ರೂ ಸಹಾಯ ಮಾಡಬಹುದು ಅಂತ ನನ್ನ ಹತ್ರ ಬಂದ್ರು. ಇಂಥದಕ್ಕೆಲ್ಲಾ ನೀನೇ ಸರಿ ಅಂತ ಅವರನ್ನ ಇಲ್ಲಿಗೆ ಕರೆತಂದಿದೀನಿ. ಆ ಹಳ್ಳಿ ಈ ಹಳ್ಳಿ ಅಂತ ಓಡಾಡುಕ್ಕೆ ನನ್ನ ಕೈಲಿ ಸುತರಾಂ ಆಗುಲ್ಲ ಅನ್ನೋದು ನಿನಗೇ ತಿಳಿದಿದೆ' ಅಂದ ಮಕರಧ್ವಜ.

'ಕೂತ್ಕೊಳ್ಳಿ, ................ಸರೋಜಮ್ಮಾ ಒಂದ್ನಾಲಕ್ ಕಾಫಿ. ಸಕ್ರೆ ಸೆಪರೇಟಾಗಿ ತಂದ್ಬಿಡಿ. ಗಾಬರೀಗೆ ಕಾರಣವಿಲ್ಲ ಶಾಸ್ತ್ರಿಗಳೇ, ದೇವರ ಆಸ್ತಿ ಕಳುವಾದ್ರೆ ನೀವೇನು-ಮಾಡಕ್ಕಾಗುತ್ತೆ. ನಾವು ಮಾಡೋ ಪ್ರಯತ್ನಾನೆಲ್ಲಾ ಮಾಡೋಣ. ಈಗ ಕಳುವಾದ ಸಂದರ್ಭಾನೆಲ್ಲಾ ವಿವರವಾಗಿ ಹೇಳಿ' ಶರಲೇಖ ಸಾಂತ್ವನದ ದನಿಯಲ್ಲಿ ಹೇಳಿದ.

ಶಾಸ್ತ್ರಿಗಳು ನಿಜವಾಗಿಯೂ ಗಾಬರಿಗೊಂಡಂತಿತ್ತು. 'ಹಯ್ಯೋ, ಏನು ಹೇಳ್ಲಿ ಸ್ವಾಮಿ. ನಾನು ಬದುಕಿರ್ಲೇಬಾರ್ದು. ಅನೂಚಾನವಾಗಿ ಬಂದ ದೇವರ ಆಸ್ತಿ ನನ್ನ ಸುಫರ್ದಿನಲ್ಲೇ ಕಳೆದುಹೋಯ್ತಲ್ಲಾ, ನಿನ್ನೆ ರಾತ್ರಿ ನಾನೇ ಸ್ವತಃ ಬೀಗ ಹಾಕಿ, ಕೀಲೀನ ಮನೆಗೆ ತಗೊಂಡು ಹೋಗಿ ನನ್ನ ಮಲಗುವ ಮನೆಯಲ್ಲೇ ಜೋಪಾನಮಾಡಿದ್ದೆ. ಬೆಳಗ್ಗೆ ಬಂದಾಗ ಗರ್ಭಗುಡಿ ಬಾಗಿಲು ಜೋರಾಗಿ ತೆರೆದಿದೆ. ಒಳಗೆ ಹೋಗಿ ನೋಡಿದ್ರೆ, ಪಚ್ಚೆಕಲ್ಲಿನ ಕಿರೀಟ ನಾಪತ್ತೆ. ಸಧ್ಯ ಮಿಕ್ಕೆಲ್ಲ ಒಡವೆಗಳೂ ಅಲ್ಲೇ ಇದ್ವು. ತಕ್ಷಣ ಪೋಲೀಸಿನೋರಿಗೆ ತಿಳಿಸಿ, ಮಹಜರ್ ಮಾಡಿಸಿ ಯಜಮಾನ್ರ ಹತ್ರ ಓಡಿಬಂದೆ. ಈಗೇನ್ಮಾಡ್ಲೀ?'

ಶರಲೇಖ ಯಾವಾಗ್ಲೂ ಮಾಡೋಹಾಗೆ ಶಾಸ್ತ್ರಿಗಳನ್ನ ಕಳುವಿನ ಬಗ್ಗೆ ಪಾಟೀಸವಾಲಿಗೆ ಗುರಿಪಡಿಸ್ಲಿಲ್ಲ, ಬದಲಿಗೆ ಅವರೊಂದಿಗೆ ಸಾವಧಾನದಿಂದ್ಲೇ ಮಾತನಾಡಿದ.

'ಶಾಸ್ತ್ರಿಗಳೇ, ನನಗೆ ನಾಳೆ ಬೆಳಗ್ಗೆ ಒಂದು ಅರ್ಜೆಂಟ್ ಕೆಲ್ಸ ಇದೆ. ಹಾಗಾಗಿ ಇವತ್ತೇ

ನಿಮ್ಮಲ್ಲಿಗೆ ಬರೋದು ಕಷ್ಟ. ಹಾಗಂತ ಆತಂಕ ಬೇಡ. ನನ್ನ ಗೆಳೆಯ ವತ್ಸನ ಈಗಲೇ ನಿಮ್ಮ ಜೊತೆ ಬಂದು ಎಲ್ಲ ವಿಷಯಗಳನ್ನೂ ಪರಿಶೀಲಿಸಿ ನನಗೆ ತಿಳಿಸ್ತಾನೆ. ನಾಳೆ ನನ್ನ ಕೆಲಸ ಮುಗಿದ ತಕ್ಷಣ ನಾನು ನಿಮ್ಮಲ್ಲಿಗೆ ಬಂದು ಈ ಪ್ರಕರಣದಲ್ಲಿ ಸಹಾಯ ಮಾಡ್ತೇನೆ. ಹುಟ್ಟಿದೂರು, ಅಲ್ಲಿನ ದೇವರು ಅಂದ ಮೇಲೆ ಇದು ನನ್ನ ಕರ್ತವ್ಯ' ಅಂದ ಶರಲೇಖ. ಅನಿರೀಕ್ಷಿತವಾಗಿ ಹೀಗೆ ಜವಾಬ್ದಾರಿ ನನ್ನ ಮೇಲೆ ಬಿದ್ರೂ , ಅಷ್ಟು ನಂಬಿಕೆ ಇಟ್ಕೊಂಡಿದಾನಲ್ಲಾ ಶರಲೇಖ ಅಂತ ಒಂದು ವಿಧದಲ್ಲಿ ನನಗೆ ಸಂತೋಷಾನೇ ಆಯ್ತು ಅನ್ನಿ. ಶಾಸ್ತ್ರಿಗಳೊಂದಿಗೆ ಬಸ್ಸಿನಲ್ಲಿ ಅವರ ಹಳ್ಳಿಗೆ ಹೊರಟೆ. ಚರ್ಚಿಸೋದು ಇನ್ನೂ ಇದೆ ಅಂತ ಹೇಳಿ ಮಕರಧ್ವಜ ಅಲ್ಲೇ ಉಳಕೊಂಡ.

ಹಳ್ಳಿ ಸೇರಿದಾಗ ಸಂಜೆ ಆರು ಗಂಟೆ ಆಗಿತ್ತು. ನೇರವಾಗಿ ಚನ್ನಕೇಶವ ದೇವಸ್ಥಾನಕ್ಕೆ ಹೋದೆವು. ಬಹು ಪುರಾತನ ದೇವಾಲಯ ಅಂತ ಹೊರನೋಟಕ್ಕೇ ಕಾಣುತ್ತಿತ್ತು. ಸ್ಥಳಪುರಾಣದ ಪ್ರಕಾರ ಅರ್ಜುನ ಕಟ್ಟಿಸಿದ ಗುಡಿಯಂತೆ ಇದು. ಸುಖನಾಸಿಯಲ್ಲಿರುವ ಹತ್ತು ಕಂಭಗಳ ಮೇಲೆ ಕಲ್ಲಿನಲ್ಲಿ ಕೆತ್ತನೆ ಮಾಡಿದ ದಶಾವತಾರದ ಮೂರ್ತಿಗಳಿದ್ದವು. ಗರ್ಭಗುಡಿಯಲ್ಲಿನ ವಿಷ್ಣು ಮೂರ್ತಿಗೆ ಹದಿನಾಲ್ಕು ಕೈಗಳು. ಕರಿಯ ಕಲ್ಲಿನಲ್ಲಿ ನಿರ್ಮಿಸಿದ ಈ ವಿಗ್ರಹ ಶಿರೋಭಾಗದಲ್ಲಿ ಕಲ್ಲಿನಿಂದಲೇ ಕೆತ್ತಿದ್ದ ಕಿರೀಟ ಇತ್ತು. 'ಈ ಕಲ್ಲಿನ ಕಿರೀಟಕ್ಕೆ ಹೊಂದೋ ಹಾಗೆ ಪಚ್ಚೆಕಲ್ಲಿನ ಕಿರೀಟವನ್ನು ಅಳತೆಯಾಗಿ ಮಾಡಿದ್ದರು. ಅದನ್ನು ಕದಿಯೋಕ್ಕೆ ಹೇಗಾದರೂ ಮನಸ್ಸು ಬಂತೋ' ಅಂತ ನರಸಿಂಹ ಶಾಸ್ತ್ರಿಗಳು ಹಲುಬಿದರು. ದೇವಸ್ಥಾನವನ್ನೆಲ್ಲಾ ಸುತ್ತಿದಮೇಲೆ, ಜೂನಿಯರ್ ಅರ್ಚಕರಿಂದ ಮಂಗಳಾರತಿ ಮಾಡಿಸಿ, ನಾನು ಶಾಸ್ತ್ರಿಗಳ ಮನೆಗೆ ಹೋದೆ. ಆ ಪುಟ್ಟಹಳ್ಳಿಯಲ್ಲಿ ಹೋಟೆಲ್ ಎಲ್ಲಿ ಬರಬೇಕು? ಶಾಸ್ತ್ರಿಗಳು ನನ್ನನ್ನು ಮನೆಯ ಜಗಲಿಯ ಮೇಲೆ ಕೂರಿಸಿ ಕೆಲಸದ ಮೇಲೆ ಒಳಕ್ಕೆ ಹೋದರು.

ನಾನು ಶರಲೇಖನನ್ನು ಮೊಬೈಲ್‌ನಲ್ಲಿ ಸಂಪರ್ಕಿಸಿದೆ.

'ಚನ್ನಕೇಶವ ದೇವಸ್ಥಾನಕ್ಕೆ ಹೋಗಿ, ಎಲ್ಲವನ್ನೂ ಕೂಲಂಕುಷವಾಗಿ ಪರಿಶೀಲಿಸಿದೆ. ದೇವಸ್ಥಾನದಲ್ಲಿ ಹತ್ತು ಕಂಭಗಳು, ಅವುಗಳ ಮೇಲೆ ದಶಾವತಾರ ಕೆತ್ತಿದ್ದಾರೆ. ಗರ್ಭಗುಡಿಯಲ್ಲಿನ ಮೂರ್ತಿಗೆ ಹದಿನಾಲ್ಕು............' ಅನ್ನೋ ಅಷ್ಟರಲ್ಲಿ ಫೋನ್ ಕಟ್ಟಾಯಿತು. ಅವನೇ ಹೇಳಿದ್ದು, 'ಕ್ರೈಮ್ ಸೀನ್ ನಲ್ಲಿ ಎಲ್ಲಾ ಅಂಶಗಳನ್ನೂ ವಿವರವಾಗಿ ನೋಡಿ ತಿಳಿಸು' ಅಂತ. ಯಾಕೆ ತಟಕ್ಕಂತ ಫೋನ್ ಇಟ್ಟುಬಿಟ್ಟನೋ ತಿಳಿಯಲಿಲ್ಲ.

ಅಷ್ಟು ಹೊತ್ತಿಗೆ ಶಾಸ್ತ್ರಿಗಳು ಜಗಲಿಗೆ ಬಂದರು.

'ಶಾಸ್ತ್ರಿಗಳೇ, ಗರ್ಭಗುಡಿಯ ಕೀಲಿ ನಿಮ್ಮ ಬಳಿನೇ ಇರುತ್ತೆ ಅಂತ ಹೇಳಿದ್ರಿ. ಬೇರೇ ಯಾರ ಹತ್ರ ಆದ್ರೂ ಇನ್ನೊಂದು ಸೆಟ್ ಕೀಲಿ ಇರುತ್ಯೇ?' ಅಂತ ಕೇಳಿದೆ.

'ಆಗಮಿಕರ ಮನೇಲಿ ಒಂದು ಸೆಟ್ ಇರುತ್ತೆ. ಎಮರ್ಜೆನ್ಸಿಗೋಸ್ಕರ. ಅವರು ಅದನ್ನ ಭಕ್ತರಹಳ್ಳಿ ಬ್ಯಾಂಕ್‌ನಲ್ಲಿ ಇಟ್ಟಿದಾರೆ.'

'ನಿಮ್ಮ ಮನೇಲಿ ಯಾರ್ಯಾರು ಇರೋದೂ?'

'ನಾನು, ನನ್ನ ಮಗ. ನಮ್ಮ ಕುಟುಂಬ ತೀರಿಕೊಂಡು ಶಾನೆ ದಿವ್ಸ ಆಯ್ತು. ಮಗಳು ಅಳಿಯ ಬೆಂಗಳೂರಿನಲ್ಲಿ ಇದಾರೆ. ಒಂದು ಮೊಮ್ಮಗು'

'ಮಗ ಏನ್ಮಾಡ್ತಾ ಇದಾನೆ?' ಲೋಕಾಭಿರಾಮವಾಗಿ ಕೇಳಿದೆ. ಶರಲೇಖನಿಗೆ ವರದಿ ಒಪ್ಪಿಸಬೇಕಲ್ಲಾ.

ಶಾಸ್ತ್ರಿಗಳು ಒಮ್ಮೆಲೇ ಸುಮ್ಮನಾದರು. ಮುಖದಲ್ಲಿ ದುಗುಡ ತುಂಬಿದಂತೆ ಕಾಣಿಸಿತು. ಅವರೇ ಸಮಾಧಾನ ತಂದುಕೊಳ್ಳಲಿ ಅಂತ ನಾನು ಸುಮ್ಮನಾದೆ. ಸ್ವಲ್ಪ ಹೊತ್ತಿನ ನಂತರ ಶಾಸ್ತ್ರಿಗಳು ನಿಧಾನವಾಗಿ ಮುಂದುವರಿಸಿದರು.

'ಏನು ಹೇಳಲಿ ಸ್ವಾಮಿ. ಮಕರಧ್ವಜ, ಶರಲೇಖ ಅವರೆಲ್ಲಾ ನಮ್ಮ ಹಿತೈಷಿಗಳು. ಅವರ ಕಡೆಯಿಂದ ಬಂದಿದೀರ. ನಿಮ್ಮಲ್ಲೇನು ಮುಚ್ಚುಮರೆ. ನನ್ನ ಮಗ ಶುದ್ಧ ಅಪ್ರಯೋಜಕ. ಸರಿಯಾಗಿ ಓದ್ಲೂ ಇಲ್ಲ. ಸುಮ್ನೆ ಕಾಲಹರಣ ಮಾಡ್ಕೊಂಡು ಇದಾನೆ. ನಿನ್ನೆ ರಾತ್ರಿಯಿಂದ ಅವನು ಮನೇಗೇ ಬಂದಿಲ್ಲ. ಇವತ್ತು ಬೆಳಗ್ಗೆ ಕಳ್ಳತನ ಆಗಿರೋದು ತಿಳಿದಮೇಲೆ ನಮ್ಮ ಶಾಮಶಾಸ್ತ್ರಿಗಳು ನನ್ನ ಹತ್ತಿರ ಬಂದು' ನಿಮ್ಮ ಮಗ ನಿನ್ನೆ ರಾತ್ರಿ ದೇವಸ್ಥಾನದ ಹತ್ರ ಠಳಾಯಿಸ್ತಾ ಇದ್ದ' ಅಂತ ಗುಟ್ಟಾಗಿ ಹೇಳಿ ಹೋದರು. ಅವನೇ ಏನಾದ್ರೂ ಈ ಹೀನ ಕೃತ್ಯ ಮಾಡ್ಬಿಟ್ಟಿದಾನೇನೋ ಅಂತ ನನಗೆ ಎದೆ ನಡುಗ್ತಾ ಇದೆ.'

ಅವರ ಮಾತು ಮುಗಿಯೋ ಹೊತ್ತಿಗೆ ನನ್ನ ಮೊಬೈಲ್‌ಗೆ ಒಂದು ಎಸ್‌ಎಂಎಸ್ ಬಂತು. 'ಮೊಬೈಲ್ ಆಫ್ ಮಾಡಿರ್ತೀನಿ. ಸಂಪರ್ಕಿಸೋದಕ್ಕೆ ಪ್ರಯತ್ನಿಸಬೇಡ. ನಾಳೆ ಸಂಜೆವರೆಗೂ ಶಾಸ್ತ್ರಿಗಳ ಜೊತೇನೇ ಇರು. ಆತಂಕ ಪಟ್ಕೊಬೇಡಿ ಅಂತ ಹೇಳು' ಅಂತ ಮೆಸೇಜ್ ಕಳಿಸಿದ್ದ ಶರಲೇಖ.

'ಶಾಸ್ತ್ರಿಗಳೇ , ಬೆಳಗಿನಿಂದ ದಣಿದಿದ್ದೀರ. ದೇವರ ಮೇಲೆ ಭಾರ ಹಾಕಿ ಸ್ವಲ್ಪ ಆರಾಮ ಮಾಡಿ. ನಾಳೆ ಹೊತ್ತಿಗೆ ಎಲ್ಲಾ ಪರಿಹಾರ ಆಗುತ್ತೆ. ಹಾಗಂತ ಶರಲೇಖ ಮೆಸೇಜ್ ಕಳಿಸಿದ್ದಾನೆ.' ಅಂತ ಹೇಳಿದೆ. ಮೊಟ್ಟಮೊದಲ ಬಾರಿಗೆ ಅವರ ಮುಖದಲ್ಲಿ ಗೆಲುವು ಕಂಡಿತು. 'ಬನ್ನಿ ಊಟ ಮಾಡೋಣ' ಅಂತ ಒಳಕ್ಕೆ ಕರೆದುಕೊಂಡು ಹೋದರು.

ಮಾರನೆಯ ಬೆಳಗ್ಗೆ ಬೆಳಕು ಹರಿಯುವ ಮುಂಚೆಯೇ ಶಾಸ್ತ್ರಿಗಳು ಎದ್ದು ಗುಡಿಯ ಕೆಲಸಕ್ಕೆ ಹೊರಟುಹೋದರು. ಹಳ್ಳಿಯಾಚೆ ಇದ್ದ ತೆಂಗಿನ ತೋಟಗಳತ್ತ ನಾನು ವಾಕಿಂಗ್ ಹೊರಟೆ. ತೋಟದ ಪಕ್ಕಕ್ಕೆ ಒಂದು ಪುಟ್ಟ ಹೊಳೆ ಹರಿಯುತ್ತಿತ್ತು. ಹೊಳೆಗೆ ಅಡ್ಡವಾಗಿ ಒಂದು ಬಿದಿರಿನ ಸೇತುವೆ. ಸೇತುವೆ ಬಹಳ ನಾಜೂಕಾಗಿದ್ದಂತೆ ಕಂಡಿತು. ದಾಟಲೋ ಬೇಡವೋ ಅಂತ ಇಬ್ಬಂದಿಗೆ ಬಿದ್ದೆ. 'ಬೋ ವಜನ್ನಾಗೈತೆ ಸೋಮೆ. ದಾಟ್ರೀ. ಯೋಸ್ನೆ ಬ್ಯಾಡ್ರಿ' ಅಂತ ಹಿಂದಿನಿಂದ ಯಾರೋ ಕೂಗಿದರು. ಹಿಂತಿರುಗಿ ನೋಡಿದೆ. ಕೆಂಪು ಪಟ್ಟೆ ರುಮಾಲು ಧರಿಸಿದ ಕಟ್ಟುಮಸ್ತಾದ ರೈತನೊಬ್ಬ ನನ್ನ ಹಿಂದೆ ನಿಂತಿದ್ದ. 'ಅಯ್ನೋರ್ ಮನೇಗ್ ಬಂದಿರೋ ಪತ್ತೇದಾರ್ರು ನೀವೇನಾ ಸೋಮೆ' ಅಂತ ಆತ ನನ್ನನ್ನ ಪ್ರಶ್ನಿಸಿದ.

'ನೀನ್ಯಾರಣ್ಣಾ?'

'ನಾನು ಮುನಿರಂಗಪ್ಪ. ಈ ಊರ ಪಟೇಲ.'

'ನಾನೇನೂ ಪತ್ತೇದಾರನಲ್ಲಣ್ಣ. ಶಾಸ್ತ್ರಿಗಳ ಸಹಾಯಕ್ಕೆ ಅಂತ ಬಂದಿದೀನಿ. ಬಹಳ ಸುಂದರವಾಗಿದೆ ನಿಮ್ಮ ಹಳ್ಳಿ. ಯಾವ್ದು ಈ ನದಿ?' ಅಂತ ಕೇಳಿದೆ.

'ನಾಗ್ನಿ ಅಂತಾವ. ಸಿವನ್ ಜಟೇಯಿಂದ ನೇರವಾಗಿ ಅರಿದು ಬರ್ತಾ ಅವ್ಳೇ ಅಂತ ನಂಬ್ಕೆ. ಅದಿರ್ಲಿ ಸೋಮ್ಮೆ, ಈಗ ಈ ಕಳುವಿನ ಸುದ್ದಿ ನೋಡ್ರಾ. ಇದ್ಕೆಲ್ಲಾ ಪತ್ತೇದಾರ್ಕೇ ಏನೂ ಪರ್ಯೋಜ್ನಾ ಇಲ್ಲ ಬುಡಿ ಬುದ್ದೀ. ಇದ್ಕೇ ಜೋಸ್ಯ ಏಳೋರು ಬರ್ಬೇಕು. ನಮ್ ಐನೋರ ಅಳಿಯ ಅವ್ರಲ್ಲಾ ಬೆಂಗ್ಳೂರ್ನಾಗೆ. ಅವ್ರು ಸಂಜೀಕ್ ಫೋನ್ ಮಾಡಿದ್ರು. ಇವತ್ತು ಸಂಜೀಕ್ಕೆ ಒಬ್ರು ಒಳ್ಳೇ ಜೋಸ್ಯರ್ನ ಇಲ್ಲೀಗ್ ಕಳಿಸ್ತಾರಂತೆ. ಗುಡೀನಾಗ್ ಪೂಜೆ ಇಟ್ಕಳ್ಳೀ. ಸುಬ ಆಗ್ನೈತೇ ಅಂತ ಏಳಿದ್ರು ಸೋಮೆ.. ಇವತ್ತು ಈ ಪೂಜೆ ಇಚಾರ ಡಂಗುರ ಒಡಿಸ್ತೀನಿ ಊರ್ನಾಗೆಲ್ಲಾ' ಅಂತ ಹೇಳಿದ ಪಟೇಲಣ್ಣ.

ಮನೆಗೆ ಹಿಂತಿರುಗುವ ವೇಳೆಗೆ ಬಿಸಿಲು ಚುರುಕಾಗಿತ್ತು. ಮಧ್ಯಾಹ್ನ ಊಟ ಮಾಡೋವಾಗ ಶಾಸ್ತ್ರಿಗಳು 'ಪಟೇಲ ಯಾರೋ ಜ್ಯೋತಿಷಿಗಳನ್ನ ಕರೆಸ್ತಾ ಇದಾನಂತೆ. ಪೂಜೆ ಹಾಕಿಸಿ ಕಳುವಿನ ವಿಷಯ ಪರಿಹಾರ ಕಂಡುಹಿಡಿಯೋಕ್ಕೆ. ಮಂತ್ರಕ್ಕೆ ಮಾವಿನ ಕಾಯಿ ಉದುರುತ್ಯೇ. ಅಂದಹಾಗೆ ಶರಲೇಖರಿಂದ ಏನಾದ್ರೂ ಸುದ್ದಿ ಬಂದಿದೆಯೇನು?' ಅಂತ ಕಾತರದಿಂದ ಕೇಳಿದರು. ನಾನು ಏನು ಹೇಳಲಿ. ಅವನಿಂದ ಟೋಟಲ್ ನ್ಯೂಸ್ ಬ್ಲಾಕ್ ಔಟ್ ಆಗಿತ್ತು. 'ಏನೂ ಚಿಂತೆ ಬೇಡ ' ಅಂತ ಲಾಯರುಗಳ ತರಹ ಹುರುಳಿಲ್ಲದ ಸಾಂತ್ವನ ಹೇಳಿದೆ.

ಆ ಸಂಜೆ ಚನ್ನಕೇಶವ ಗುಡಿಯಲ್ಲಿ ವಿಪರೀತ ಜನಸಂದಣಿ. ಡಂಗುರದ ಪ್ರಭಾವ ಚೆನ್ನಾಗಿಯೇ ಆಗಿತ್ತು. ಗರ್ಭಗುಡಿಯ ಮುಂದೆ ಜ್ಯೋತಿಷಿಗಳಿಗೆ ಅಂತ ಒಂದು ಎತ್ತರದ ಆಸನ. ಆರು ಗಂಟೆ ಹೊತ್ತಿಗೆ ಜನಗಳ ಗುಂಪಿನಲ್ಲಿ ಗಿಜಿಗಿಜಿ ಶುರುವಾಯಿತು. ಆಮೇಲೆ ಜ್ಯೋತಿಷಿಗಳು ಬಹು ಗಾಂಭೀರ್ಯದಿಂದ ನಡೆದುಬಂದರು. ಉದ್ದನೆಯ ಕಾವಿ ನಿಲುವಂಗಿ ಧರಿಸಿದ್ದ ಅವರ ಕೇಶರಾಶಿ ಅನೇಕ ಖ್ಯಾತ ಗುರುಗಳ ಕೇಶವಿನ್ಯಾಸವನ್ನೂ ಮೀರಿಸಿತ್ತು. ಜ್ಯೋತಿಷಿಗಳು ಬಂದು ಕುಳಿತ ನಂತರ ಊರ ಪಟೇಲ, ಅವರಿಗೆ ಅಡ್ಡಬಿದ್ದು 'ಸೋಮೇರೇ, ನಮ್ ಊರಿನ ಮರ್ವಾದೆ ನಿಮ್ಕೈಲೈತೆ. ಎಂಗಾರಾ ಮಾಡಿ ನಮ್'ದ್ಯಾವ್ರ ಆಸ್ತಿ ಕೊಡಿಸ್ಬುಡಿ' ಅಂತ ಕೇಳಿಕೊಂಡ. ಜ್ಯೋತಿಷಿಗಳು 'ಎಲ್ಲಾ ಭಗವದಿಚ್ಛೆ, ನನ್ನ ಪ್ರಯತ್ನವನ್ನ ನಾನು ಮಾಡುವೆ' ಅಂತ ಹೇಳಿ ಗರ್ಭಗುಡಿಯ ಒಳಹೊಕ್ಕರು. ಹತ್ತು ನಿಮಿಷಗಳ ಕಾಲ ಒಳಗಿನಿಂದ ಘಂಟಾರವ, ಪೂಜಾ ಮಂತ್ರಗಳ ಪಠಣ ಎಲ್ಲಾ ಕೇಳಿಬಂತು. ಆಮೇಲೆ ಒಮ್ಮೆಲೇ ಬಾಗಿಲು ತೆರೆಯಿತು. ಒಳಗಿನ ಧೂಮ ಕ್ರಮೇಣ ಕಡಿಮೆಯಾದಂತೆ, ಚನ್ನಕೇಶವ ವಿಗ್ರಹದ ಮುಡಿಯಲ್ಲಿ ಪಚ್ಚೆಕಲ್ಲಿನ ಕಿರೀಟ ರಾರಾಜಿಸುತ್ತಿದ್ದುದು ಕಾಣಿಸಿತು. ಜನಸ್ತೋಮ 'ಪವಾಡ. ಪವಾಡ' ಎಂದು ಹುಚ್ಚೆದ್ದು ಕುಣಿಯಿತು.

ಅಷ್ಟುಹೊತ್ತಿಗೆ ದೇವಸ್ಥಾನದ ಹೊರ ಆವರಣದಲ್ಲಿ ಪೋಲೀಸ್ ವ್ಯಾನೊಂದು ಬಂದು ನಿಂತಿತು. ಇಬ್ಬರು ಪೋಲೀಸಿನವರು ಇಳಿದುಬಂದು, ಜ್ಯೋತಿಷಿಗಳನ್ನ ವ್ಯಾನಿಗೆ ಕರೆದೊಯ್ದು ಒಳಗೆ ಕೂರಿಸಿದರು. ನೋಡುತ್ತಿದ್ದಂತೆ ಪೋಲೀಸರು ಪುನಃ ವ್ಯಾನಿನಿಂದ ಇಳಿದು ನೇರವಾಗಿ ನನ್ನಲ್ಲಿಗೇ ಬಂದರು. 'ಇನ್ಸ್‌ಪೆಕ್ಟರ್ ಉಳ್ಳಾಗಡ್ಡಿ ಅವರು ವ್ಯಾನಿನನಲ್ಲಿದ್ದಾರೆ. ನಿಮ್ಮನ್ನ ಕರೆತರಲು ಹೇಳಿದ್ದಾರೆ' ಅಂತ ಒಬ್ಬ ಪ್ಯಾದೆ ಹೇಳಿದ. ನಾನೂ ವ್ಯಾನನ್ನು ಹತ್ತಿದೆ. ವ್ಯಾನು ಭರ್ರನೆ ಹಳ್ಳಿಬಿಟ್ಟು ಬೆಂಗಳೂರಿನ ದಾರಿ ಹಿಡಿಯಿತು .

ಹಳ್ಳಿಯ ಸರಹದ್ದನ್ನು ದಾಟಿದಮೇಲೆ ಜ್ಯೋತಿಷಿಗಳು ತಮ್ಮ ಗಡ್ಡ ಶಿಖೆಗಳನ್ನು ತೆಗೆದರು. ಶರಲೇಖ! 'ಇದೇನು ಇದೆಲ್ಲದರ ಅರ್ಥ?' ಅಂತ ಕೇಳಿದೆ. ಉಳ್ಳಾಗಡ್ಡಿಯವರೂ ಸಹಾ 'ಎಲ್ಲಾ ವಿವರವಾಗಿ ಹೇಳಿಬಿಡಿ ಸಾರ್, ನನಗೂ ಕೆಲವು ಅಂಶಗಳು ತಿಳಿದಿಲ್ಲ' ಅಂತ ದನಿಗೂಡಿಸಿದರು.

ಶರಲೇಖ ತನ್ನ ವಿವರಣೆ ಶುರುಮಾಡಿದ.

'ನಿನ್ನೆ ನೀನು ಶಾಸ್ತ್ರಿಗಳನ್ನ ಕರೆದುಕೊಂಡು ಹೊರಟಾಗ ಮಕರಧ್ವಜ ನನ್ನಲ್ಲಿಯೇ ಉಳಕೊಂಡಿದ್ದು ನೆನಪಿರಬಹುದು. ತಮ್ಮ ಹಳ್ಳಿಯೋನೇ ಅಂತ ಮಕರಧ್ವಜನ್ನ ಕಂಡರೆ ನಮ್ಮ ಹಳ್ಳಿಯಲ್ಲಿ ಬಹಳ ಮರ್ಯಾದೆ. ಅದಕ್ಕೇ ಶಾಸ್ತ್ರಿಗಳೂ ಅವನ ಬಳಿಯೇ ಸಹಾಯ ಕೇಳಿ ಓಡಿಬಂದದ್ದು. ಶಾಸ್ತ್ರಿಗಳು ಬರುಕ್ಕೆ ಸ್ವಲ್ಪ ಮುಂಚೆಯೇ ಅವರ ಮಗ ಮಕರಧ್ವಜನ ಬಳಿ ಬಂದಿದ್ದನಂತೆ. ಈ ಕಿರೀಟದ ಕಳುವು ಒಂದು ದೊಡ್ಡ ಕಥೆ. ಶಾಸ್ತ್ರಿಗಳ ಮಗಳಿಗೆ ಒಂದು ರೀತಿಯ ಮನೋವ್ಯಾಧಿ. ಮಗೂಗೆ ಎಲ್‌ಕೇಜೀಲಿ ಸೀಟು ಸಿಗಬೇಕಾದರೆ ಪಚ್ಚೆಕಲ್ಲಿನ ಕಿರೀಟಾನ ಮನೇಗೆ ತಂದು ಪೂಜೆ ಮಾಡಬೇಕು ಅಂತ ಆಕೆಗೆ ಕನಸು ಬಿತ್ತಂತೆ. ಸರಿ, ಗಂಡನಿಗೆ ಚಿತ್ರಹಿಂಸೆ ಕೊಟ್ಟು ಈ ಕಳ್ಳತನಕ್ಕೆ ಪ್ರಚೋದಿಸಿದಳಂತೆ. ಆತ ಶಾಸ್ತ್ರಿಗಳ ಮಲಗುವ ಕೋಣೆಯಿಂದ ಒಂದು ವಾರದ ಹಿಂದೆಯೇ ಕೀಲಿಯನ್ನು ಕದ್ದು ಅದರ ಪ್ರತಿರೂಪ ಮಾಡಿ ಮೊನ್ನೆ ರಾತ್ರಿ ಕಳವು ಮಾಡಿದನಂತೆ. ತನ್ನ ಭಾವ ಕೀಲಿ ಕಳವು ಮಾಡಿದ್ದನ್ನು ಶಾಸ್ತ್ರಿಗಳ ಮಗ ನೋಡಿದ್ದನಂತೆ. ಸಂಶಯ ಬಂದು ಅವನು ದೇವಸ್ಥಾನದ ಬಳಿಯೇ ಗಸ್ತು ತಿರುಗುತ್ತಿದ್ದನಂತೆ. ಭಾವ ಕಿರೀಟವನ್ನು ಕಳವು ಮಾಡಿ ಬೆಂಗಳೂರಿಗೆ ಹೊರಟಾಗ ಇವನೂ ಅವನನ್ನ ಹಿಂಬಾಲಿಸಿದನಂತೆ. ಅವನು ಮನೆ ಸೇರಿದ ಮೇಲೆ ನೇರವಾಗಿ ಮಕರಧ್ವಜನ ಬಳಿಗೆ ಹೋಗಿ ಅವನ ಸಹಾಯ ಕೇಳಿದನಂತೆ. 'ಇದು ಪೋಲೀಸರಿಗೆ ತಿಳಿದರೆ ಮನೆತನದ ಮರ್ಯಾದೆ ಹೋಗುತ್ತೆ ಹೇಗಾದರೂ ಮಾಡಿ ನಮ್ಮ ಮರ್ಯಾದೆ ಕಾಪಾಡಿ' ಅಂತ ಶಾಸ್ತ್ರಿಗಳ ಮಗ ಕೇಳಿಕೊಂಡನಂತೆ. ಇದನ್ನೆಲ್ಲಾ ಮಕರಧ್ವಜ ನನಗೆ ಹೇಳಿದ ಮೇಲೆ ನಾನು ಉಳ್ಳಾಗಡ್ಡಿಯವರೊಂದಿಗೆ ಶಾಸ್ತ್ರಿಗಳ ಅಳಿಯನ ಮನೆಗೆ ಹೋಗಿ ಕಿರೀಟ ಹಿಂದಕ್ಕೆ ಪಡೆದೆ. ಆ ಅಳಿಯನ ಮೂಲಕಾನೇ ಊರ ಪಟೇಲನಿಗೆ ಫೋನ್ ಮಾಡಿಸಿ ಈ ಜ್ಯೋತಿಷಿಯ ಆಟ ಹೂಡಿದೆ. ಮುಂದಿನದೆಲ್ಲಾ ನಿನಗೇ ತಿಳಿದಿದೆ ಅಂದ ಶರಲೇಖ.

'ಹೆಂಡತಿ ಹೇಳಿದಳು ಅಂತ ಗಂಡ ಕಳ್ಳತನ ಮಾಡ್ತಾನ್ಯೇ? ನನಗಂತೂ ನಂಬುಕ್ಕೇ ಆಗುಲ್ಲ' ಅಂದೆ.

'ಮೆಂಟಲ್ ಟಾರ್ಚರ್‌ನ ಪರಿಣಾಮಗಳು ಅನೇಕ. ಮನೋವ್ಯಾಧಿ ಇದೆ ಅಂತ ಒಪ್ಪಿಕೊಳ್ಳದೇ, ಸಂಸಾರದ ಶಾಂತಿ ಉಳಿಸ್ಕೊಳ್ಳೋಕ್ಕೋಸ್ಕರ ಗಂಡಂದಿರು ಏನಾದ್ರೂ ಮಾಡಬಹುದು. ಈ ಬಗ್ಗೆ ನಾನು ಬರೆದಿರೋ ಲೇಖನ ಓದು' ಅಂದ ಶರಲೇಖ.

# ಆಸ್ಪತ್ರೆಯಲ್ಲಿ

**- ಓಂ ಪ್ರಕಾಶ್**

ವೈದ್ಯಕೀಯ ವಿಭಾಗದ O.P.D ಅರ್ಥಾತ್ ಹೊರರೋಗಿಗಳ ವಿಭಾಗ, ಒಬ್ಬಾತ ಬಂದು, ಹಲವು ವರ್ಷಗಳಿಂದ ಆಸ್ತಮ ಇರೋದನ್ನ ಹೇಳಿಕೊಂಡ, ಯಾವುದಾದರೂ ಖಾದ್ಯವಸ್ತುಗಳಿಂದ ಅಲರ್ಜಿ ಆಗಬಹುದಲ್ಲ ಅಂತ ಪ್ರಶ್ನೆ ಕೇಳೋದು ಮುಖ್ಯ. ಆತ, ''ಪರ್‌ಮ್ಯಾಂಗನೇಟ್ ತಿಂದರೆ ಕೆಮ್ಮು ಹೆಚ್ಚಾಗುತ್ತೆ!'' ಅಂದ. ನಾನು ಬೆಚ್ಚಿದೆ. ಆಮೇಲೆ ಜ್ಞಾನೋದಯವಾಯಿತು, ದಾಳಿಂಬೆ ಹಣ್ಣಿನ ಪ್ರಭಾವ!!

★★★

ನಮ್ಮ ದಂತವೈದ್ಯರು ಹೇಳಿದ್ದು ಇದು. ಒಬ್ಬ 6 ವರ್ಷದ ಹುಡುಗ ಬಂದ, ಹುಳುಕು ಹಲ್ಲು, ಬಹಳ ನೋವು, ತಣ್ಣಗೆ ಇರೋದನ್ನ ತಿಂದರೆ ಯಾತನೆ! ವೈದ್ಯರು ಆ ಹಲ್ಲನ್ನು ತೆಗೆದರು. ಹುಡುಗ, 'ನನಗೆ ಕೊಡಿ ಡಾಕ್ಟರ್!' ಅಂದ, 'ಏಕೆ?' ಅಂದರು ವೈದ್ಯರು. ''ಅದರ ಮೇಲೆ ಐಸ್ ಹಾಕಿ ಹೇಗೆ ನೋಯುತ್ತೆ ಅಂತ ನೋಡಬೇಕು!'' ಅಂದ!

★★★

ಆತ ಪಾಪ ಮದ್ಯಪಾನದಿಂದ ಮೆತ್ತನಾಗಿ ಎಮರ್ಜೆನ್ಸಿ ವಾರ್ಡಿಗೆ ಕರೆತಂದರು. ಅಡ್ಮಿಟ್ ಮಾಡಿದರು. ಮರುದಿನ ಬೆಳಗ್ಗೆ ನಾವು ರೌಂಡ್ಸ್‌ನಲ್ಲಿ ನೋಡಿದೆವು. ನನ್ನ ಸಹೋದ್ಯೋಗಿ ವೈದ್ಯರು ಕೇಳಿದರು. ''ನೀವು ಈಗ ಎಲ್ಲಿದ್ದೀರ?'' ಆತ, ''ಪೆಟ್ರೋಲ್ ಸ್ಟೇಷನ್‌ನಲ್ಲಿ ಇನ್ನೆಲ್ಲಿ?'' ಅಂದ. ವೈದ್ಯರು, 'ಹಾಗಾದರೆ ನಾವೆಲ್ಲ ಯಾರು?' ಅಂದರು. ಬಿಳಿ ಕೋಟ್‌ಗಳನ್ನು ನೋಡುತ್ತ ಅವನೆಂದ, ''ಪೆಟ್ರೋಲ್ ಹಾಕೋರು!'' ನಾವು ಅವಾಕ್ಕಾದೆವು!



ಗುಡ್ ಕೊಲೆಸ್ಟರಾಲ್, ಬ್ಯಾಡ್ ಕೊಲೆಸ್ಟರಾಲ್
ಆಟ ಹೂಡೋಣ ಇವನ ಹತ್ರ

# ಮದುವೆಯ ಮಮತೆಯ ಕರೆಯೋಲೆ

**-ನಂದಿನಿ ಕಾಪಡಿ**

ಸುಂದರವಾದ ದಂತದ ಬಣ್ಣದ ಕರೆಯೋಲೆ. ನಾಲ್ಕೂ ಮೂಲೆಗಳಿಗೆ ಅರಿಶಿನ ಹಚ್ಚಿದ, ಕವರಿನೊಳಗೆ ಆದರದ ಕರೆಯೋಲೆ. ತಮ್ಮ ಮಗಳದ್ದೋ ಅಥವಾ ಮಗನ ಲಗ್ನಕ್ಕೆ ಆದರದ ಆಮಂತ್ರಣ. "ಮದುಮಕ್ಕಳನ್ನು ಆಶೀರ್ವದಿಸಿ ತಮ್ಮ ಮನಸ್ಸಂತೋಷ ಪಡಿಸಿ" ಎಂದು ಪ್ರೀತಿಯ ಸವಿನಯ ಬೇಡಿಕೆ! ಆಹಾ! ಎಂತಹ ಸುಂದರ ಲಗ್ನ ಪತ್ರಿಕೆ! ನನ್ನ ಬಾಲ್ಯದ ದಿನಗಳ ನೆನಪು ಕಾಡಿತು!

ನನ್ನ ಹಗಲುಗನಸು ಫೋನಿನ ಟ್ರಿಂಗುಡುವುದರಿಂದ ಮುರಿದು, ಬೇಜಾರಾಗಿಯೇ "ಹಲೋ" ಎಂದೆ! ಆ ಕಡೆಯಿಂದ ರಮಣಿಕ್ ಭಾಯಿಯ ಕರ್ಕಶ ಧ್ವನಿ. "ಬೆಹನ್ ಜೀ ನೀವಿನ್ನೂ ನಿಮ್ಮ ಮಗಳ ಮದುವೆಯ ಆಮಂತ್ರಣ ಪತ್ರಿಕೆಯ ಪ್ರತಿಯನ್ನು ನೋಡಿದಂತಿಲ್ಲ. ನಿಮ್ಮ ಇ-ಮೇಯ್ಲಿಗೆ ಕಳಿಸಿ ಎರಡು ಗಂಟೆಗಳಾದವು. ದಯವಿಟ್ಟು ಬೇಗನೇ ನೋಡಿ ನಿಮ್ಮ ಒಪ್ಪಿಗೆ ತಿಳಿಸಿ" ಎಂದು ಕೂಗಿದ.

ರಮಣಿಕ್ ಭಾಯಿ ಕಾರ್ಡ್‌ವಾಲಾ ನಮ್ಮ ಮುಂಬೈನ ಗಿರಿಗಾಂವಿನಲ್ಲಿ "ಇನ್ವಿಟೇಷನ್ ಗಲ್ಲಿ" ಎಂದು ಹೆಸರು ಪಡೆದಿರುವ ಖಾಡಿಲ್‌ಕರ್ ಮಾರ್ಗದಲ್ಲಿರುವ ಒಂದು ಅಂಗಡಿಯ ಮಾಲೀಕನ ತಮ್ಮನ ಮಗ. ನಮ್ಮ ಮಗಳ ಮದುವೆ ಗೊತ್ತಾಗಿ ಇನ್ನೇನು ಎರಡು ತಿಂಗಳುಗಳು ಮಾತ್ರ ಉಳಿದಿವೆ. ಎಂದು ಹೆದರಿಕೆಯಿಂದಲೇ ನಾನು ಮತ್ತು ಶ್ರೀಮಾನರು ಗಿರಿಗಾಂವ್‌ನ ಕಡೆಗೆ ಪಯಣಿಸಿದ್ದೆವು.

ಮೊದಲ ಅಂಗಡಿ ನೋಡಲು ಹೊರಗಿನಿಂದ ತುಂಬಾ ಸುಂದರವಾಗಿತ್ತು. "ಬನ್ನಿ ಬೆಹನ್‌ಜೀ, ಬನ್ನಿ ಸೀಠ್" ಎಂದೇ ಆದರದಿಂದ ಅಂಗಡಿಯವ ಒಳ ಕರೆದ. "ಬೇಬಿಯ ಮದುವೆ ತಾನೆ? ನನ್ನ ಹತ್ತಿರ ಒಳ್ಳೊಳ್ಳೆ ಡಿಸೈನುಗಳಿವೆ" ಎಂದ.

ಮೊದಲು ತೋರಿಸಿದ್ದು ಒಂದು ಭರ್ಜರಿ ಕಾರ್ಡು. ಕಾರ್ಡು ಅನ್ನುವುದಕ್ಕಿಂತ ಅದೊಂದು ಚಿತ್ರಪಟ ಅನ್ನಬಹುದು. ವಧು ಸಾಲಂಕೃತಳಾಗಿ ಡೋಲಿಯಲ್ಲಿ ಕುಳಿತಿದ್ದಾಳೆ. ವರ ಕುದುರೆ ಮೇಲೆ ಕುಳಿತು ಮುಂದೆ ಹೋಗುತ್ತಿದ್ದಾನೆ. ಅಕ್ಕಪಕ್ಕದಲ್ಲಿ ಗಾಯಕರು, ನರ್ತಕರು ಹಾಗೆ. ನಾನು ಒಂದೆರಡು ಸಲ ಹಿಂದೆ ಮುಂದೆ ತಿರುಗಿಸಿ ನೋಡಿ "ಭಾಯಿ ಸಾಬ್, ಈ ಚಿತ್ರಪಟದ ಬೆಲೆ ಸುಮಾರು ಎಷ್ಟಾಗಬಹುದು?" ಎಂದೆ. "ಬೆಹನ್‌ಜೀ, ಬಹುಶಃ ನಿಮಗೆ ಈ ಕಾರ್ಡು ದೊಡ್ಡದೆನಿಸಿದರೆ ಇಲ್ಲಿ ನೋಡಿ. ಅದೇ ಸುಂದರ ಕಲ್ಪನೆ, ಆದರೆ ಚಿಕ್ಕದು" ಎಂದು ಹೇಳಿ ಇನ್ನೊಂದು ಚಿತ್ರಪಟ ತೋರಿಸಿದ. ಹೀಗೆ ನಾಲ್ಕಾರು ಕಾರ್ಡುಗಳನ್ನು ನೋಡಿದ ನಂತರ ಮತ್ತೊಮ್ಮೆ ನಾನು "ಇದರ ಬೆಲೆಯೆಷ್ಟು" ಎಂದ ರೆಕಾರ್ಡು ಬಾರಿಸಿದಾಗ ಅವನು ಒಂದು ತರಹಾ ನಕ್ಕು "ಬೇಟಿಯ ಮದುವೆ ಮಾಡುತ್ತಿದ್ದೀರಿ. ನೀರಿಗಿಳಿದ ಮೇಲೆ ತಣ್ಣಗಿದೆ ಎಂದು ಅಂಜುತ್ತೀರಾ, ಹೆದರಬೇಡಿ, ನಿಮ್ಮನ್ನು ನೋಡಿಯೇ ನಾನು ನಮ್ಮ

ಅಂಗಡಿಯ ತುಂಬ ಕಡಿಮೆ ಬೆಲೆಯಿರುವ ಕಾರ್ಡುಗಳನ್ನೇ ತೋರಿಸಿದ್ದೀನಿ. ಮೊದಲನೆಯ ಕಾರ್ಡಿನ ಮೇಲೆ ಸ್ವರೋಸ್ಕಿ ಕ್ರಿಸ್ಟಲ್ ಮಣಿಗಳಿವೆ. ಅದರ ಬೆಲೆ ಬರೀ ಎಂಟುನೂರು ರೂಪಾಯಿ ಮಾತ್ರ. ಎರಡನೆಯದು ಆರುನೂರಾ ಐವತ್ತು. ಮೂರನೆಯದು ಬರೀ ಏಳು ನೂರು ಮಾತ್ರ. ನಾಲ್ಕನೆಯದು ಬಹುಶಃ ನಿಮ್ಮ ಬಜೆಟ್ಟಿಗೆ ಬರಬಹುದು. ಬರೀ ಮುನ್ನೂರು ರೂ ಗಳು ಮಾತ್ರ'' ಎಂದ.

ಯಜಮಾನರು ಆಗಲೇ ಎದ್ದಿದ್ದರು. ''ನಂತರ ನೋಡೋಣ'' ಎಂದು ಬಾಗಿಲ ಹೊರಗೆ ಬಂದರು. ನಾನು ನಿಧಾನವಾಗಿ ಏಳುತ್ತಿದ್ದಾಗ ''ಎಂತೆಂಥವರೋ ಬರುತ್ತಾರೆ. ಸುಮ್ಮನೆ ನಮ್ಮ ಸಮಯ ಹಾಳು'' ಎಂದು ಗೊಣಗಿಕೊಂಡ ಮಹಾಶಯ!

ನನ್ನ ಪರ್ಸಿನೊಳಗೆ ಆಮಂತ್ರಣ ಕೊಡಬೇಕಾದವರ ಪಟ್ಟಿ ಸಿದ್ಧವಾಗಿತ್ತು. ಒಂದು ಸಾವಿರ ಕಾರ್ಡುಗಳನ್ನು ಛಾಪಿಸಬೇಕಿತ್ತು. ಅದಲ್ಲದೇ ಅಂಚೆ ಚೀಟಿಯ ಬೆಲೆ ಬೇರೆ! ಸರಿ ಮುಂದೆ ಹೋಗೋಣ ಎಂದು ಕೊಂಡೆ. ಮುಂದಿನ ನಾಲ್ಕು ಅಂಗಡಿಗಳಲ್ಲಿ ವಿಚಾರಿಸಿಯಾಯಿತು. ಒಂದು ಕಾರ್ಡಿಗೆ ಇನ್ನೂರೈವತ್ತರಿಂದ ಬೆಲೆ ಪ್ರಾರಂಭವಾಗಿ ಕಡೆಗೆ ಐದು ರೂಪಾಯಿ ಬೆಲೆ ಬಾಳುವ ಕಾರ್ಡನ್ನು ನೋಡಿಯಾಯಿತು. ತಲೆ ಗೊಂದಲದಿಂದ ತುಂಬಿಹೋಯಿತು.

ಕಡೆಯಲ್ಲಿ ''ಇನ್ವಿಟೇಷನ್ ವರ್ಲ್ಡ್'' ಎಂಬ ಹೆಸರಿದ್ದ ಅಂಗಡಿಯೊಳಗೆ ಕಾಲಿರಿಸಿದಾಗ ನನ್ನ ಮೈ ಬೆವತು ಹೋಗಿತ್ತು. ''ಬನ್ನಿ ಬನ್ನಿ... ನೀವು ಪೂರ್ತಿ ಗಲ್ಲಿ ಸುತ್ತಿ ಬಂದಿರಬೇಕು. ಪರವಾಗಿಲ್ಲ, ನನ್ನ ಹತ್ತಿರ ಎಲ್ಲ ಮಾದರಿಗಳಿವೆ. ನಿಮ್ಮಿಬ್ಬರನ್ನು ನೋಡಿ ಬಹುಶಃ ನಿಮಗೆ ಯಾವುದು ಇಷ್ಟವಾಗುವುದೆಂದು ಊಹಿಸುತ್ತೇನೆ'' ಎನ್ನುತ್ತಲೇ ಮಣಿ ಮಣಿಯಾಗಿ ಮಾತನಾಡಿ ಬುಟ್ಟಿಗೆ ಹಾಕಿಕೊಂಡ ರಮಣಿಕ ಭಾಯಿ.

ನಾಲ್ಕೈದು ಪ್ರತಿಗಳನ್ನು ನೋಡಿಯಾಯಿತು. ಮುಖ್ಯವಾಗಿ ನಮ್ಮ ಬಜೆಟ್ಟಿನಲ್ಲಿ ಬರಬಹುದೆಂದು ಖಾತ್ರಿಯಾಯಿತು. ರಮಣಿಕ್ ಭಾಯಿ ಉತ್ಸಾಹದಿಂದಲೇ ಹತ್ತಾರು ಮಾದರಿಗಳನ್ನು ನಮ್ಮ ಮುಂದಿರಿಸಿದ. ತರಹ ತರಹ ಪೇಪರುಗಳು, ತರಹ ತರಹಾವರಿ ಡಿಸೈನುಗಳು, ತಂದೆ ತಾಯಿಗಳು ಆಮಂತ್ರಿಸುವುದು, ವಧೂ-ವರರೇ ಆಮಂತ್ರಿಸುವುದು, ವಧುವಿನ ತಮ್ಮ-ತಂಗಿಯರ ಆಹ್ವಾನ ಒಂದೇ ಎರಡೇ! ನಾನೂ ಕನ್ನಡಕ ಮೂಗಿನ ಮೇಲೇರಿಸಿ ಮನಸ್ಸಿನಲ್ಲೇ ಲೆಕ್ಕಹಾಕಿಕೊಳ್ಳುತ್ತಿದ್ದೆ. ಶ್ರೀಮಾನರು ಪಿಸುಗುಡುತ್ತಾ ''ನೋಡು ತುಂಬಾ ಬೆಲೆ ಉಳಿಸಲು ಎಂತೆಂತಹುದೋ ಕಾರ್ಡನ್ನು ನೋಡಬೇಡ. ನಮ್ಮ ಚೇರ್‌ಮನ್ನರು ಕುಲಕರ್ಣಿಯ ಮಗಳ ಕಾರ್ಡನ್ನು ನೋಡಿ ತುಂಬಾ ನಗಾಡಿದ್ದರು. ಇಂತಹ ಕಾರ್ಡು ಮಾಡಿಸುವ ಬದಲು ಸಮಾಚಾರ ಪತ್ರಿಕೆಯೊಂದಿಗೆ ಬರುವ ಕೈ ಹೊತ್ತಿಗೆ ಮಾಡಬಹುದಿತ್ತು ಎಂದೆಲ್ಲಾ ಹೇಳಿದ್ದರು'' ಎಂದು ಚಡಪಡಿಸಿದರು.

ಮೇಲಿರುವ ಗಣಪತಿ ಕೈಮುಗಿದು, ನಾನು ಕೂಲಂಕುಷವಾಗಿ ನೋಡಿದೆ. ಒಂದು ಕಾರ್ಡಿನ ಮೇಲೆ ಗಣಪತಿಯ ಆಧುನಿಕ ಚಿತ್ರ. ಒಂದೇ ಕೈ, ಒಂದೇ ಕಿವಿ, ಒಂದೇ ಕಣ್ಣು ಸೊಂಡಿಲಿನಿಂದ ಮಾತ್ರ ಗಣಪತಿ ಎಂದು ತಿಳಿಯಬಹುದಿತ್ತು. ರಮಣಿಕ್ ಭಾಯಿ ಆಚಿತ್ರ

ಒಬ್ಬ ಖ್ಯಾತ ಕಲಾವಿದ ರಚಿಸಿದ ಚಿತ್ರದ ಮೇಲೆ ಅವಲಂಬಿಸಿದೆ ಎಂದ. ಬಣ್ಣಬಣ್ಣದ ಮಣಿಗಳು, ಫಳಫಳನೇ ಹೊಳೆಯುವ ಕಲ್ಲುಗಳು, ಮಕ್‌ಮಲ್ಲಿನ ಹೊದಿಕೆ, ಜರಿಯಂಚಿನ ಆಮಂತ್ರಣ ಪತ್ರಿಕೆಗಳೂ ತೋರಿಸಲ್ಪಟ್ಟವು. ಗೊಂದಲದಲ್ಲಿ ಗೊಂದಲವೆಂಬಂತೆ ನಮ್ಮೆದುರಿಗೇ ಇನ್ನೊಬ್ಬ ಮಧ್ಯವಯಸ್ಕ ದಂಪತಿಗಳು ಬಂದು ತಾವೂ ಪತ್ರಿಕೆಗಳನ್ನು ನೋಡತೊಡಗಿದರು. ನಾನು ಪಕ್ಕಕ್ಕೆ ತೆಗೆದಿರಿಸಿದ ಕಾರ್ಡುಗಳೆಲ್ಲವನ್ನೂ ಅವರಿಬ್ಬರು ನೋಡಿ ನಂತರ ಬೇರೆಲ್ಲೋ ಸೇರಿಸಿಬಿಟ್ಟರು.

ಅಷ್ಟರಲ್ಲಿ ಮಗಳ ಫೋನು. "ಸುಮ್ಮನೇ ಮನೆಗೆ ಬನ್ನಿ. ಇಂಟರ್‌ನೆಟ್ಟಿನಲ್ಲಿ ಕೋಟ್ಯಾನು ಕೋಟಿ ಆಮಂತ್ರಣ ಪತ್ರಿಕೆಗಳ ವಿವರಣೆ ಇದೆ. ನೀವು ಸುಮ್ಮನೆ ತಲೆಕೆಡಿಸಿಕೊಳ್ಳಬೇಡಿ. ಮನೆಯಲ್ಲೇ ಆರಾಮವಾಗಿ ಕಂಪ್ಯೂಟರನ್ನು ಕ್ಲಿಕ್ಕಿಸಿದರೆ ಸಾಕು. ಬೇಕಾದಷ್ಟು ಸವಲತ್ತುಗಳಿವೆ." ಎಂದು ಪೂಸಿ ಮಾಡಿದಳು.

ನಾವಿಬ್ಬರೂ ಎದ್ದುಬಿಟ್ಟೆವು. "ನಂತರ ಬರುತ್ತೇವೆ" ಎಂದು ಆಶ್ವಾಸನೆಯನ್ನು ಕೂಡಾ ಕೊಟ್ಟೆವು. ರಮಣಿಕ್ ಭಾಯಿ ಒಂದು ತರಹಾ ನಕ್ಕು ನನ್ನ ಕಡೆಯೇ ನೋಡುತ್ತಾ "ಮೇಡಂ, ಇದು ನನ್ನ ಇಂಟರ್ ನೈಟ್‌ನ ಸೈಟ್" ಇದನ್ನು ತಪ್ಪದೇ ವ್ಯೂಯಿಸಿ ಎಂದ! ನಮ್ಮ ಫೋನಿನ ಸಂಭಾಷಣೆ ಇವನು ಹೇಗೆ ಕೇಳಿಸಿಕೊಂಡ, ಕಿಲಾಡಿ ಎಂದು ಕೊಂಡೆ.

ಇಂಟರ್ ನೆಟ್ಟನ್ನು ಜಾಲಾಡಿ ಬಿಟ್ಟೆವು ಮನೆಯವರೆಲ್ಲರೂ! ಜಾಲದೊಳಗೆ ಜಾಲ. ಜಾಲದಲ್ಲೊಂದು ಮರಿಜಾಲ. ಸಾವಿರಾರು ಜಾಹೀರಾತುಗಳ ನಂತರ ರಮಣಿಕ್ ಭಾಯಿಯ "ಇನ್ವಿಟೇಷನ್ ವರ್ಲ್ಡ್" ಕಾಣಿಸಿಕೊಂಡಿತು. ಬೇರೆ ಎಲ್ಲರಿಗಿಂತ ಇವನದೇ ಮಾದರಿಗಳು ಚೆನ್ನಾಗಿ ಕಂಡವು. ಯಜಮಾನರು ರಮಣಿಕ್ ಭಾಯಿಗೆ ಫೋನಾಯಿಸಿ ಸಂಜೆ ಮತ್ತೆ ಬರುತ್ತೇವೆಂದರು! ಅಲ್ಲಿಂದ "ನೀವು ಖಂಡಿತಾ ಬರುತ್ತೀರೆಂದು ಗೊತ್ತು" ಎಂದ ರಮಣಿಕ್ ಭಾಯಿ.

ಸಂಜೆ ನನ್ನ ಇಬ್ಬರೂ ಮಕ್ಕಳು ನಮ್ಮ ಜೊತೆಗೆ ಬಂದರು. ಎರಡು ಗಂಟೆಗಳಷ್ಟು ಚರ್ಚೆಯ ನಂತರ ಒಂದು ಕಾರ್ಡಿನತ್ತ ನಿರ್ಧಾರ ದೃಢವಾಯಿತು. ಮಗಳ ಮುಹೂರ್ತದ ಸೀರೆ ಬಿಳಿಯ ಜರಿ ಒಡಲಿಗೆ ಕೆಂಪು ಜರಿಯ ಅಂಚು ಹೊಂದಿತ್ತು. ಅಂತೆಯೇ ಹೊರಗಿನ ಕವರು ಬಿಳಿ, ಒಳಗಿನ ಕಾರ್ಡು ಕೆಂಪು ಮತ್ತು ಅಕ್ಷರಗಳು ಚಿನ್ನದ ಬಣ್ಣದಲ್ಲಿರುವುದು ಎಂದು ನಿರ್ಧರಿಸುವ ಹೊತ್ತಿಗೆ ಹೊರಗಿನಿಂದ ಅಂಗಡಿ ಮುಚ್ಚಿಯಾಗಿತ್ತು!

ರಮಣಿಕ್ ಭಾಯ್ ಪ್ರೂಫಿಗೆ ಒತ್ತಾಯಿಸಿದ್ದ. ನಾನೊಬ್ಬಳೇ ನಿರ್ಧಾರ ಮಾಡಲು ಯಾರು? ಯಜಮಾನರೂ ಮತ್ತು ಮಕ್ಕಳೂ ಒಮ್ಮೆ ನೋಡಲಿ ಎಂದು ಹಾಗೆಯೇ ಕಂಪ್ಯೂಟರ್ ಮುಚ್ಚಿ ಬಂದೆ. ನನ್ನ ಗೆಳತಿಯ ಫೋನು ಬಂದಿತು. "ಅಲ್ಲ ಕಣೆ, ಪರಿಣೆಯು ನಾದಿನಿ ದುಬೈನಿಂದ ಬಂದು ಇಲ್ಲಿ ಮಗಳ ಮದುವೆ ಮಾಡುತ್ತಿದ್ದಾಳಂತೆ ಮಗಳ ಆಮಂತ್ರಣ ಪತ್ರಿಕೆ ಹೇಗಂತೆ ಗೊತ್ತಾ? ಕಾಂಚೀಪುರಂ ಸೀರೆ ನೇಯಿಸುವವರ ಹತ್ತಿರ ಇನ್ವಿಟೇಷನ್ ನೇಯಿಸುತ್ತಿದ್ದಾಳಂತೆ. ಕೆಂಪು ಬಣ್ಣದ ರೇಷಿಮೆ. ಮತ್ತು ಅಪ್ಪಟ ಚಿನ್ನದ ಜರಿಯಂತೆ! ಎರಡೂ

ಬದಿಯಲ್ಲಿ ಶ್ರೀಗಂಧದ ಕಡ್ಡಿಗಳಂತೆ! ಅದನ್ನು ಸುತ್ತಿ ಕಟ್ಟಲು ಚಿನ್ನದ ಜರಿಯಿಂದ ಮಾಡಿರುವ ಗೊಂಡೆಯಂತೆ!'' ಎಂದೆಲ್ಲಾ ಹೇಳಿದಳು.

ನನ್ನ ಮುಖ ಪ್ರಸನ್ನವಾಯಿತು. ಪರವಾಗಿಲ್ಲ ದುಡ್ಡಿದ್ದವರಿಗೆ ಅಭಿರುಚಿಯೂ ಇದ್ದರೆ ಏನೆಲ್ಲಾ ಮಾಡಬಹುದು ಎಂದುಕೊಂಡೆ. ನನ್ನ ದೊಡ್ಡಮಗಳು ಆಫೀಸಿನ ಮಧ್ಯದಲ್ಲೇ ಫೋನಾಯಿಸಿದಳು. ''ಮಮ್ಮಿ ನನ್ನ ಮದುವೆಯ ಕಾರ್ಡಿಗೆ ಸ್ವಲ್ಪ ಲ್ಯಾವೆಂಡರ್ ಪರ್‌ಫ್ಯೂಮ್ ಸಿಂಪಡಿಸಿ ನಂತರ ಹಂಚೋಣ.'' ನನ್ನ ಕಾಲೇಜಿನ ಗೆಳತಿ ಹಾಗೆ ಮಾಡಿದ್ದಳು ಎಂದಳು. ಸ್ವಲ್ಪ ಮಾತನಾಡಿ ಇಡುವಾಗ ''ಮಮ್ಮಿ ಜಯಲಲಿತಾ ತಮ್ಮ ಸಾಕು ಮಗನ ಮದುವೆ ಮಾಡಿದಾಗ ಆಮಂತ್ರಣ ಪತ್ರಿಕೆ ಜೊತೆಗೆ ಕಾಂಜೀವರಂ ಸೀರೆ, ರೇಷಿಮೆ ಮಗುಟವನ್ನೂ ಕಳಿಸಿದ್ದರಂತೆ. ನಿನಗೆ ನೆನಪಿದೆ ತಾನೆ'' ಎಂದು ಜೋಕನ್ನೂ ಮಾಡಿದಳು. ಓಹೋ ಆ ಸಂಗತಿ ಯಾವ ಭಾರತೀಯನಿಗೆ ತಾನೆ ನೆನಪಿಲ್ಲ?

ಅಂದೇ ಸಂಜೆ ಯಜಮಾನರ ಗೆಳೆಯರ (ಭಾವೀ ಬೀಗರ) ಆಗಮನವಾಯಿತು. ಗೆಳೆಯರ ಮಗ. ಇವರ ಮಗಳನ್ನು ವಿವಾಹವಾಗಲಿದ್ದ. ಚಹಾಕೊಟ್ಟು ಆದರಿಸಿದೆ. ಅವರು ಆಮಂತ್ರಣ ಪತ್ರಿಕೆ ಕೊಟ್ಟರು, ನನಗೆ ಇಷ್ಟು ಹೊತ್ತಿಗೆ ಆಮಂತ್ರಣ ಪತ್ರಿಕೆಗಳು ಮಾದರಿಗಳು, ಅವುಗಳ ಬೆಲೆ ಎಲ್ಲವೂ ಮನದಟ್ಟಾಗಿದ್ದವು. ಈ ಪತ್ರಿಕೆಗೆ ಬಹುಶಃ ಐವತ್ತೈದು ರೂಪಾಯಿಗಳಾಗಿರಬೇಕು ಎಂದು ಕೊಳ್ಳುತ್ತಿದ್ದಾಗಲೇ, ಶ್ರೀಮತಿಯವರು ನನ್ನ ಕೈಗೆ ಮಿಠಾಯಿ ಡಬ್ಬಿ ಮತ್ತು ಒಂದು ಬೆಳ್ಳಿಯ ಕುಂಕುಮದ ಕರಂಡವನ್ನೂ ಕೊಟ್ಟು ''ಇದೊಂದು ಸಣ್ಣ ಉಡುಗೊರೆ. ತೆಗೆದುಕೊಳ್ಳಿ'' ಎಂದರು.

''ಇದೇನು ಮದುವೆಯ ಮುಂಚೆಯೇ ಉಡುಗೊರೆಯೆ'' ಎಂದೆ. ''ಮದುವೆಯ ಗಡಿಬಿಡಿಯಲ್ಲಿ ಮರೆತು ಹೋಗಬಹುದು ಅದಕ್ಕೆ ಈಗಲೇ ಕೊಡುತ್ತಿದ್ದೀವಿ'' ಎಂದರು. ''ಸರಿ ಈ ಉಡುಗೊರೆಯನ್ನು ಹಿಂತಿರುಗಿಸುವುದು ಹೇಗೆ'' ಎಂದು ಮನಸ್ಸಿನಲ್ಲೇ ಚಿಂತಿತಳಾದೆ. ಇಂದಿನ ಕಾಲದಲ್ಲಿ ಎಲ್ಲವೂ ಹಿಂತಿರುಗಿಸುವ ವ್ಯವಹಾರಗಳೇ! ಆತ್ಮೀಯತೆ ಎಲ್ಲಿ?

ಅಷ್ಟರಲ್ಲಿ ಚಿಕ್ಕ ಮಗಳ ಆಗಮನವಾಯಿತು. ''ಅಕ್ಕನ ಮದುವೆಯ ಆಮಂತ್ರಣ ಪತ್ರಿಕೆಯನ್ನು ಅಂಚೆಯಲ್ಲಿ ಕಳಿಸುವುದು ಬೇಡ. ಅದು ತುಂಬಾ ಮಾಮೂಲು. ನಾವು ಕೊರಿಯರ್ ಮೂಲಕವೇ ಕಳಿಸೋಣ.'' ಎಂದಳು ಯಜಮಾನರು ತಲೆದೂಗಿದರು. ನಾನು ಸರ್ಕಾರಿ ನೌಕರಳು. ''ಬೇಡ ಬೇಡ ಅಂಚೆ ಚೀಟಿ ಸರ್ಕಾರದ ಬೊಕ್ಕಸ ತುಂಬಿಸುತ್ತದೆ. ನಾವು ಅಂಚೆಯಲ್ಲೇ ಕಳಿಸೋಣ'' ಎಂದೆ ಯಜಮಾನರು ಮತ್ತೆ ಗೊಂದಲದಲ್ಲಿ ಸಿಲುಕಿದರು.

ರಮಣಿಕ್ ಭಾಯ್‌ನ ಹತ್ತು ಫೋನುಗಳ ನಂತರ ನಮ್ಮ ಕಾರ್ಡು ಹೇಗಿರಬೇಕೆಂದು ನಿರ್ಧಾರವಾಯಿತು. ಮೊದಲಿಗೆ ಕೊಂಚ ಹಣವೂ ಕೊಟ್ಟಾಯಿತು. ಇನ್ನೊಂದುವಾರ ಬಿಟ್ಟು ಬನ್ನಿ ಎಂದು ಹೇಳಿದ್ದ.

ಇಷ್ಟರಲ್ಲಿ ''ಪಕ್ಕದ ಫ್ಲಾಟಿನ ಚಂದೂಲಾಲರ ಮಗಳು ಸ್ವೀಟಿ ಓಡಿ ಹೋಗಿ ಮದುವೆ ಮಾಡಿಕೊಂಡಳೆಂಬ ಸುದ್ದಿ ಬಂದಿತು. ಪರವಾಗಿಲ್ಲ ಚಂದೂಲಾಲನಿಗೆ ಆಮಂತ್ರಣ ಪತ್ರಿಕೆ

ನಿರ್ಧರಿಸುವ ಬಗ್ಗೆ ನಮಗಾದಷ್ಟು ಕಷ್ಟವಾಗಲಿಲ್ಲ'' ಎಂದು ಯಜಮಾನರು ನಗಾಡಿದರು. ನಾನೂ ತಲೆದೂಗಿದೆ!

ಆಗಲೇ ದೊಡ್ಡ ಮಗಳು ಬಂದಳು. ಮುಖ ಸಣ್ಣದಾಗಿತ್ತು. ನಾನು ಏನು ಸಮಾಚಾರವೆಂದು ವಿಚಾರಿಸಿದೆ. ''ನನ್ನ ಮದುವೆಯಿಂದ ನಿಮ್ಮಿಬ್ಬರಿಗೂ ತುಂಬಾ ಖರ್ಚು ವೆಚ್ಚ, ನನಗೆ ಇದೊಂದೂ ಬೇಡ. ನಾನು ಮತ್ತು ನನ್ನ ಭಾವೀ ಪತಿ ನಿರ್ಧಾರ ಮಾಡಿದ್ದೇವೆ. ನಮಗೆ ಇಷ್ಟೆಲ್ಲಾ ಆಡಂಬರ ಬೇಡ. ಸುಮ್ಮನೇ ಮನೆಯಲ್ಲೇ ಮದುವೆ ಮಾಡಿ, ಖರ್ಚು ಉಳಿಸೋಣ'' ಎಂದಳು!

ನಮ್ಮಿಬ್ಬರಿಗೂ ಆತಂಕವಾಯಿತು. ವಿಷಯ ಏನೆಂದು ಕೂಲಂಕುಷವಾಗಿ ವಿಚಾರಿಸಿದಾಗ ಅವಳ ಗೆಳತಿಯ ತಂದೆಗೆ ಹೃದಯಾಘಾತವಾಗಿ ಅವರು ಆಸ್ಪತ್ರೆಯಲ್ಲಿದ್ದಾರೆಂದೂ, ಸರ್ಜರಿಗೆ ನಾಲ್ಕು ಲಕ್ಷ ಕೇಳಿದ್ದಾರೆಂದೂ, ಇವರಿಗೆ ಈಗಲೇ ಮಗಳ ಮದುವೆ ಮಾಡಿರುವುದರಿಂದ ಖರ್ಚಿಗೆ ತುಂಬಾ ಇಕ್ಕಟ್ಟಾಗಿದೆಯೆಂದೂ ತಿಳಿಯಿತು.

ನಾನೂ ಮತ್ತು ಯಜಮಾನರೂ ಮಗಳ ಹತ್ತಿರ ಸಮಜಾಯಿಷಿ ಹೇಳಿದೆವು. ನಾವು ಯಾವುದೇ ಆಡಂಬರ ಮಾಡುವುದಿಲ್ಲವೆಂದೂ, ಅವಳು ನಿಶ್ಚಿಂತೆಯಾಗಿರಬೇಕೆಂದೂ ಹೇಳಿದೆವು. ಆಮಂತ್ರಣ ಪತ್ರಿಕೆಗಳು ಆಗಲೇ ಅಚ್ಚಿನಲ್ಲಿದ್ದವು.

ಎರಡನೆಯ ಮಗಳು ತಾನು ಮಾತ್ರ ತನ್ನ ಗೆಳತಿಯರಿಗೆ ''ಈ ಕಾರ್ಡು'' ಕಳಿಸುತ್ತೇನೆಂದು ತಿಳಿಸಿದಳು. ಅಂತೆಯೇ ವಿದೇಶದಲ್ಲಿರುವ ನಮ್ಮ ಎಲ್ಲ ಬಂಧು ಮಿತ್ರರಿಗೂ ಬರೀ ''ಇ-ಕಾರ್ಡು'' ಕಳಿಸಬೇಕೆಂದು ನಿರ್ಧರಿಸಿದೆವು. ಅದರಿಂದ ಎಷ್ಟೋ ಸಾವಿರಗಳು ಉಳಿತಾಯವಾಗುವುದೆಂದು ಸಂತೋಷವೂ ಆಯಿತು! ಹೊಸ ತಂತ್ರ ಜ್ಞಾನದಿಂದ ಮಾನವನಿಗೆ ಎಷ್ಟೊಂದು ಒಳಿತಾಗಿದೆ ಎಂದು ವಿಚಾರವೂ ಬಂದಿತು.

ಅಷ್ಟರಲ್ಲಿ ಕಾಲಿಂಗ್ ಬೆಲ್ಲಿನ ಸದ್ದಾಯಿತು. ಹೊರಗೆ ನೋಡಿದರೆ ಅಂದವಾಗಿ ಸಿಂಗರಿಸಿಕೊಂಡ ಬಾಲಕ ತನ್ನ ಗೆಳೆಯರೊಂದಿಗೆ ಬಂದಿದ್ದಾನೆ. ನಮ್ಮ ಮನೆಯೊಳಗೆ ಬಂದು ''ಮುಂದಿನ ವಾರ ಶಾಂತೇಷ್ ಶರ್ಮರ ಮಗಳು ಶ್ಯಾಮಲಿ ರಾಕೇಷ್ ಮಿಶ್ರಾರ ಮಗ ಅಮಿತ್ ನೊಂದಿಗೆ ಲಗ್ನವಾಗುತ್ತಿದ್ದಾಳೆ. ತಾವು ಈ ಲಗ್ನಕ್ಕೆ ದಯಮಾಡಿಸಿ ವಧೂವರರನ್ನು ಆಶೀರ್ವದಿಸಿ'' ಎಂದು ರಾಗವಾಗಿ ಹಾಡಿದ.

ಹುಡುಗನ ತಂಗಿ ಸುಂದರವಾಗಿ ಸಿಂಗರಿಸಿಕೊಂಡು, ಅಕ್ಷತೆಯ ಬಟ್ಟಲನ್ನು ನಮ್ಮ ಮುಂದೆ ಹಿಡಿದಳು.

''ಭಲೆ, ತುಂಬಾ ಸುಂದರ ಕಲ್ಪನೆ'' ಎಂದು ಕೊಳ್ಳುತ್ತಾ ಮಕ್ಕಳಿಗೆ ಸಿಹಿ ಕೊಟ್ಟು ಕಳಿಸಿದೆ.

ಎರಡನೆಯ ಮಗಳ ಮದುವೆಗೆ ನಾವೂ ಹೀಗೇ ಮಾಡೋಣ ಎಂದು ಕೊಳ್ಳುತ್ತಲೇ ಆಮಂತ್ರಣ ಪತ್ರಿಕೆಗಳ ಮೇಲೆ ಹೆಸರು, ವಿಳಾಸ ಬರೆಯಲು ಒಳಹೋದೆ! ಮದುವೆಯ ಮಮತೆಯ ಕರೆಯೋಲೆಗಳು ನನ್ನನ್ನು ಕೈ ಬೀಸಿ ಕರೆದವು.

# ತುಂತುರು

- ಬಡಿಸುವವನಿಗೂ ಹಸಿವಾಗುತ್ತದೆ.
- ಮುಂದೆ ಬರಬಹುದಾದ ಸಿನಿಮಾ: ಅಮರ್ (ಸಿಂಗ್) ಅಮಿತಾಬ್ ಅಭಿಷೇಕ್.
- *Laughter is the medicine; medicine is not laughter.*
- ದರೋಡೆಕಾರರಿಗೆ ಇಷ್ಟವಾಗುವುದು: ರಾಬರಿ ಐಸ್‌ಕ್ರೀಂ
- ಪುಸ್ತಕ ಬಿಡುಗಡೆ ಕಾರ್ಯಕ್ರಮದಲ್ಲಿ ಏನೇ ಹೇಳಿದರೂ ಆದೀತು: ಏಕೆಂದರೆ ಅದನ್ನು ಯಾರೂ ಓದಿರುವುದಿಲ್ಲ.
- *You do not have to be alone to be lonely.*
- ಮಾಡುವ ಕೆಲಸ ಅನಾಚಾರವಾದರೂ ಹೆಸರು ಕೆಡಿಸಿಕೊಳ್ಳಬಾರದು.
- *Kal aaj aur cull*
- ವಾದ ತರ್ಕಬದ್ಧವಾಗಿದ್ದರೆ ಧ್ವನಿ ಏರಿಸಬೇಕಿಲ್ಲ.
- ನೀವು ಸಮಯಕ್ಕೆ ಸರಿಯಾಗಿ ಬರಲು ಆಗದಿದ್ದರೆ ಬೇಗನೇ ಬಂದುಬಿಡಿ.
- (ನರೇಂದ್ರ) ಮೋದಿ ವಾದಿಸುವಾಗ ಮಿಕ್ಕವರು ಅನುಕಿಮೋದಿಕಿಸುವರೆ?
- ಭೂಗತ ಲೋಕದವರ ಆತ್ಮಕಥನ 'ದಾದಾಗಿರಿಯ ದಿನಗಳು' ಎಂದಾದರೆ ನರ್ಸ್ ಒಬ್ಬಳ ವೃತ್ತಾಂತವನ್ನು 'ದಾದಿಗಿರಿಯ ದಿನಗಳು' ಎಂದು ಕರೆಯಬಹುದೆ?
- *Q: What is the root cause for global warming*<br>*A: Mallika Sherawat.*
- ಸರ್ಕಾರಿ ನೌಕರರು: ವಾರಕ್ಕೆ ಐದು ದಿನಗಳಾದರೇನು? ಆರು ದಿನಗಳಾದರೇನು? ಕೆಲಸ ಮಾಡುವುದು ವಾರಕ್ಕೆ ಐದಾರು ಗಂಟೆ ಅಲ್ಲವೇನು?
- ಅಂದು: *home sweet home.* ಈಗ *(home)loan sweet loan.*

**- ದಂನಆ**

# ಅಟ್ಯಾಚ್‌ಮೆಂಟು

- ಬಿ.ಎಸ್. ಶೈಲಜಾ

(ಜನವರಿ ತಿಂಗಳಲ್ಲಿ ಬ್ರಹ್ಮ ಕಳುಹಿಸಿದ ಅಟಾಚ್‌ಮೆಂಟು ಸಾಮಾನ್ಯವಾಗಿ ಫೆಬ್ರವರಿಯಲ್ಲಿ ನಮಗೆ ತಲುಪಬೇಕಾಗಿತ್ತು. ಫೆಬ್ರವರಿಯಲ್ಲಿ ಅದು ನಮಗೆ ತಲುಪಲೇ ಇಲ್ಲ. ಬ್ರಹ್ಮಲೋಕದ ಇಂಟರ್‌ನೆಟ್ ಸರ್ವರ್ ಇರುವುದು ತ್ರಿಶಂಕು ಲೋಕದಲ್ಲಿ. ಅಲ್ಲಿ ವಿಚಾರಿಸಿದಾಗ, ಅವರು ಕಳುಹಿಸಿದ ಮೇಲೆ ವೈತರಣೀಯ ಕೆಳಗಣ ಕೇಬಲ್ ಜಖಂ ಆದ ಪ್ರಯುಕ್ತ ನಮಗೆ ಸೇರಿಲ್ಲವೆಂದು ತಿಳಿದು ಬಂತು. ಕೊನೆಗೂ ಭಗೀರಥ ಪ್ರಯತ್ನ ಮಾಡಿ ಆ ಅಟಾಚ್‌ಮೆಂಟನ್ನು ಇಲ್ಲಿಗೆ ತರಿಸಿದ್ದೇವೆ.)

(ಭಗವಾನ್ ವಿಷ್ಣುವಿಗೆ ಬ್ರಹ್ಮನಿಂದ ಬಂದ ರಾಜೀನಾಮೆ ಪತ್ರದೊಡನೆ ಇದ್ದ ಕಾನ್‌ಫಿಡೆನ್ಷಿಯಲ್ ಅಟ್ಯಾಚ್‌ಮೆಂಟು)

ಒಂದಾನೊಂದು ಕಾಲದಲ್ಲಿ ಕರ್ಕಾಟಕ ಎಂಬ ದೇಶದಲ್ಲಿ ಬೆಂದ್ಕಾಳೂರು ಎಂಬ ನಗರದಲ್ಲಿ ರಾಮಯ್ಯ ಎಂಬ ವರ್ತಕನು ಅನುರೂಪಳಾದ ಸೀತಮ್ಮ ಎಂಬುವಳೊಡನೆ ಗೃಹಸ್ಥಾಶ್ರಮವನ್ನು ಆಚರಿಸುತ್ತಿದ್ದನು. ಬಹುದಿನಗಳಿಂದ ಅವರಿಗೆ ಸಂತಾನ ಭಾಗ್ಯದ ಕೊರತೆಯು ಕಾಡುತ್ತಿದ್ದಿತು. ಈ ಚಿಂತೆಯಿಂದ ಸೀತಮ್ಮಳು ಕೊರಗಿ ಕೃಶಳಾಗತೊಡಗಿದುದನ್ನು ಕಂಡು ರಾಮಯ್ಯನು ಭಯಭಕ್ತಿಗಳಿಂದ ಶ್ರೀಮನ್ನಾರಾಯಣನನ್ನು ಅರ್ಚಿಸಿದನು. ಇದರಿಂದ ಶ್ರೀಮನ್ನಾರಾಯಣನ ಶಾಂತಿಗೆ ಭಂಗ ಉಂಟಾಗಿದ್ದನ್ನು ಗಮನಿಸಿದ ಲಕ್ಷ್ಮೀದೇವಿಯು ನಾರದ ಮಹರ್ಷಿಯೊಡನೆ ಅನ್ಯೋಪಾಯಗಳನ್ನು ಚರ್ಚಿಸಿದಳು. ಈ ಸಂಧಾನಕ್ಕೆ ಪಾರ್ವತಿ ಹಾಗೂ ಸರಸ್ವತಿಯಳನ್ನು ಬರಮಾಡಿಕೊಂಡಳು. ರಾಮಯ್ಯನ ಉಗ್ರ ತಪಸ್ಸಿನಿಂದ ತ್ರಿಮೂರ್ತಿಗಳು ಧರೆಗಿಳಿಯುವಂತಾಗಿ ಏನನ್ನಾದರೂ ವರಕೊಟ್ಟು ಹಿಂದಿನ ಅನೇಕಾನೇಕ ಸಂಹಾರ-ಉಪಸಂಹಾರಗಳ ಪುನರಾವೃತ್ತಿ ಆಗಿಬಿಡಬಹುದೆಂದು ಮೂವರಿಗೂ ಆತಂಕವಾಗಿಬಿಟ್ಟಿತ್ತು. ತಾಳಾಸುರ, ತಾರಕಾಸುರ.... ಇತ್ಯಾದಿ ವಧೆಗಳು ದುಃಸ್ವಪ್ನಗಳಾಗಿ ಕಾಡತೊಡಗಿದ್ದವು. ಆದ್ದರಿಂದ ದೇವಿಯು, ''ಎಲೈನಾರದ ಮಹರ್ಷಿಯೇ, ಹೇಗಾದರೂ ಇವನನ್ನು ತಪಸ್ಸಿನಿಂದ ವಿಮುಖಗೊಳಿಸಿ ನಮಗೆ ಶಾಂತಿ ಒದಗಿಸು'' ಎಂದು ಅಪ್ಪಣೆ ಕೊಡಿಸಿದಳು. ನಾರದನು ಚಿಂತಾಮಗ್ನನಾಗಲು ಚತುರಮತಿಯಾದ ಸರಸ್ವತಿಯು, ''ನೀನು ಎಂದಿನಂತೆ ಕಲಹ ಪ್ರಿಯನಾಗದಿರು; ಈಗಲೇ ಧರೆಗೆ ತೆರಳಿ, ಆ ದಂಪತಿಗಳನ್ನು ತೀರ್ಥಯಾತ್ರೆಗೆ ಹೊರಡಿಸು. ಆಗ ನಮಗೆ ಯೋಜನೆಗೆ ಕಾಲಾವಕಾಶ ಸಿಗುವುದು'' ಎಂದಳು. ತತ್‌ಕ್ಷಣವೇ ನಾರದ ಮುನಿಯು ರಾಮಯ್ಯನ ಮುಂದೆ ಬ್ರಾಹ್ಮಣ ವೇಷಧಾರಿಯಾಗಿ ಪ್ರತ್ಯಕ್ಷನಾಗಿ, ''ಎಲೈ ಭಕ್ತನೇ, ನಿನ್ನ ಮೊರೆಯು ಪರಮಾತ್ಮನನ್ನು ಮುಟ್ಟಿರುವುದರಲ್ಲಿ ಸಂದೇಹವೇ ಇಲ್ಲ. ನೀನು ಈಗಲೇ ಬದರಿ, ಕಾಶಿ ಮುಂತಾದ ಕ್ಷೇತ್ರಗಳೊಂದನ್ನಾದರೂ ಸಂದರ್ಶಿಸು'' ಎಂದು ನಿರ್ದೇಶಿಸಿದನು. ವಿಧೇಯರಾದ ದಂಪತಿಗಳು ತಕ್ಷಣವೇ ಸಿದ್ಧರಾಗಿ ಹೊರಟರು.

ಪಾರ್ವತಿದೇವಿಗೆ ಈಗೊಂದು ಯೋಜನೆ ಹೊಳೆಯಿತು. ಸೀತಮ್ಮನ ಮನಸ್ಸಿನಲ್ಲಿ ತಾನೇ ಪಾರ್ವತಿ ಎಂಬ ಭ್ರಮೆ ಉಂಟುಮಾಡಿ ಅವರ ತೀರ್ಥಯಾತ್ರೆಯ ಫಲ ಸಂದಾಯವಾಗದಂತೆ ಮಾಡಿದರೆ ಹೇಗೆ? ಎಂದುಕೊಂಡು ಅದೇ ಪ್ರಕಾರ ಆದೇಶವನ್ನು ಕಳುಹಿಸಿದಳು.

ವರ್ತಕನಾದ ರಾಮಯ್ಯನು ತನ್ನ ವೃತ್ತಿಗೆ ಅನ್ಯಾಯವಾಗಬಾರದೆಂಬ ಉದ್ದೇಶದಿಂದ

ವಿಮಾನಯಾತ್ರೆಯ ಅವಕಾಶವಿರುವ ಕ್ಷೇತ್ರವೊಂದನ್ನು ಆರಿಸಿ ಯಾತ್ರೆಗೆ ಸನ್ನದ್ಧನಾದನು. ಅಷ್ಟರಲ್ಲಾಗಲೇ ಜಗನ್ಮಾತೆಯ ಆದೇಶವು ಸೀತಮ್ಮನನ್ನು ಆವರಿಸಿತ್ತು. ಆದ್ದರಿಂದ ಆಕೆ ಪುಣ್ಯಕ್ಷೇತ್ರದಲ್ಲಿ ಪೂಜಾದಿನಗಳಲ್ಲಿ ಭಾಗವಹಿಸದೇ ವಿಮನಸ್ಕಳಾದಳು. ಇದರಿಂದ ತ್ರಿಮೂರ್ತಿಗಳು ಚಕಿತರಾದರು; ದೇವಿಯರು ಸಮಾಧಾನದ ನಿಟ್ಟುಸಿರುಗರೆದರು.

ದೇವಾಲಯದ ಪಾಟಬೀದಿಗಳ ಧೂಳನ್ನು ಚೆನ್ನಾಗಿ ಮೈಗೆ ಹತ್ತಿಸಿಕೊಂಡು ಬಂದ ಸೀತಮ್ಮನಿಗೊಂದು ಅದ್ಭುತ ಉಪಾಯ ತಲೆದೋರಿತು. ತಾನು ಜಗನ್ಮಾತೆಯಾದದ್ದರಿಂದ ತನ್ನದೇಹದ ಬೆವರಿನಿಂದಲೂ (ವಿನಾಯಕನನ್ನು ಗೌರಿ ಸೃಷ್ಟಿಸಿದಂತೆ) ಬಾಲಕನನ್ನು ಸೃಷ್ಟಿಸಬಹುದಲ್ಲವೇ? ಮೂರ್ನಾಲ್ಕುದಿನ ಸ್ನಾನ ಮಾಡದೇ ಧೂಳು ಮತ್ತು ಬೆವರನ್ನು ಸಂಗ್ರಹಿಸಿ ಗೊಂಬೆಯನ್ನು ಸೃಷ್ಟಿಸಿಯೇ ಬಿಟ್ಟಳು. ಶಿಶುವಿನಂತೆ ಲಾಲಿಸತೊಡಗಿದಳು. ರಾಮಯ್ಯನಿಗೆ ದಿಗ್ಭ್ರಮೆಯಾಯಿತು. ಇದು ಕ್ಷೇತ್ರಮಹಾತ್ಮೆ ಇರಬೇಕೆಂದು ಭಾವಿಸಿಕೊಂಡನು. ಹಿಂದಿರುಗುವಾಗ ಆಕೆಯು ವಿಮಾನದಲ್ಲಿ ಪುತ್ರನಿಗಾಗಿ ಆಸನವನ್ನು ಬೇಡಿದಾಗ, ರಾಮಯ್ಯನಿಗೂ ಅಧಿಕಾರಿಗಳಿಗೂ ವಾಗ್ವಾದವೇ ನಡೆದು ಹೋಯಿತು. ಚಿಂತಾಕ್ರಾಂತನಾದ ರಾಮಯ್ಯನು ಪತ್ನಿಯು ಶಾಂತಚಿತ್ತಳಾಗಿರುವುದನ್ನು ಕಂಡು ತನ್ನ ಕ್ರೋಧವನ್ನು ಹತ್ತಿಕ್ಕಿಕೊಂಡನು. ಆದರೆ ಕೆಲವೇದಿನಗಳಲ್ಲಿ ಹೊಸದೊಂದು ಸಮಸ್ಯೆ ಉದ್ಭವಿಸಿತು. ಸೀತಮ್ಮನು ಪುತ್ರರತ್ನವನ್ನು ಶಾಲೆಗೆ ಕಳಿಸುವ ಏರ್ಪಾಡು ಮಾಡಲು ಆಗ್ರಹಿಸತೊಡಗಿದಳು. ಪಕ್ಕದಲ್ಲೇ ಇದ್ದ ಶಾಲೆ, ಅದಕ್ಕೆ ಸೇರಿಸಲು ಬೇಕಾಗುವ ದೀರ್ಘ ವಿಧಾನ, ಡೊನೇಷನ್ ಎಂಬ ಕಾಣಿಕೆ ಇದನ್ನೆಲ್ಲಾ ನೆನೆಸಿಕೊಂಡು, ಇದಕ್ಕೆ ಮೂಲವಾದ ಪುತ್ರರತ್ನನನ್ನು ಕಂಡು ಶಾಲೆಯಿಂದ ದೊರಕಬಹುದಾದ ವಾಗ್ದುರಿ ಇವೆಲ್ಲವನ್ನೂ ಕಲ್ಪಿಸಿಕೊಂಡು ಭೀತನಾದ ರಾಮಯ್ಯನು ಕ್ರೋಧಾವಿಷ್ಟನಾಗಿ ಆ ಪುತ್ರರತ್ನವನ್ನು ಎತ್ತಿ ಒಗೆದುಬಿಟ್ಟನು. ಆ ಪುತ್ಥಳಿಯ ಶಿರಚ್ಛೇದನವಾಯಿತು. ಕ್ಷಣಕಾಲ ಹೆದರಿದ ಸೀತಮ್ಮ ತತ್‌ಕ್ಷಣವೇ ತಾನೇ ಜಗನ್ಮಾತೆಯೆಂದು ನೆನಪಿಸಿಕೊಂಡು, ''ಈಗಿಂದೀಗಲೇ ಉತ್ತರದಿಕ್ಕಿಗೆ ತಲೆ ಇಟ್ಟು ಮಲಗಿರುವ ಯಾವುದಾದರೂ ಪ್ರಾಣಿಯ ಶಿರವನ್ನು ತಂದುಕೊಡಿ'' ಎಂದು ಆಜ್ಞಾಪಿಸಿ, ರಾತ್ರಿಯ ಕಗ್ಗತ್ತಲಿನಲ್ಲಿ ಧಾರಾಕಾರವಾಗಿ ಸುರಿಯುತ್ತಿದ್ದ ಮಳೆಯಲ್ಲಿ ರಾಮಯ್ಯನನ್ನು ಹೊರಕ್ಕೆ ಅಟ್ಟಿಬಿಟ್ಟಳು.

ಮಳೆಯಲ್ಲಿ ನೆನೆಯುತ್ತಾ, ನಡುಗುತ್ತಾ ರಾಮಯ್ಯನು ನಾರದ ಮುನಿಯನ್ನು ಶಪಿಸತೊಡಗಲು, ಆ ಮುನಿಯು ಓಡಿ ಬಂದು ತ್ರಿದೇವಿಯರ ಸಭೆ ಏರ್ಪಡಿಸಿದನು. ಈ ಹೊಸ ಆಪತ್ತಿನಿಂದ ಮೂವರೂ ದಿಗ್ಭ್ರಾಂತರಾದರು ಆಗ ಚತುರೆಯಾದ ಸರಸ್ವತಿಯು ಹೊಸದೊಂದು ಸಲಹೆಯನ್ನಿತ್ತಳು. ಇದಕ್ಕೆ ಎರಡು ಹೊಸ ಆವಿಷ್ಕಾರಗಳ ಬಳಕೆಯಾಗಬೇಕು. ಮೊದಲನೆಯದು: ರಕ್ತವರ್ಣದ ಮನುಷ್ಯರ ನಡುವೆ ಡಾಲಿ ಎಂಬ ಕುರಿಮರಿಯೊಂದು ಬ್ರಹ್ಮದೇವನ ಅನುಮತಿ ಇಲ್ಲದೇ ಜನ್ಮವೆತ್ತಿದೆ. ಅದೇ ಪ್ರಯೋಗಶಾಲೆಯಲ್ಲಿ ಇನ್ನೂ ಕೆಲವು ಇಂತಹ ಜೀವಗಳಿವೆ.

ಎರಡನೆಯದು: ಐನ್‌ಸ್ಟೈನ್ ಎಂಬ ವಿಜ್ಞಾನಿಯ ಮಿದುಳಿನ ಸಹಾಯದಿಂದ ಬ್ರಹ್ಮದೇವನ ಗಡಿಯಾರವನ್ನು ಹಿಂದಕ್ಕೆ ತಿರುಗಿಸಬಹುದು.

ಈ ಎರಡು ಉಪಾಯಗಳನ್ನು ಸೇರಿಸುವುದರಿಂದ ಸಮಸ್ಯೆ ಬಗೆಹರಿಸಬಹುದು. ಮೊದಲು, ಪ್ರಯೋಗಶಾಲೆಯಿಂದ ಜೀವವೊಂದನ್ನು ತರುವುದು, ಆಮೇಲೆ ಬ್ರಹ್ಮದೇವನ ಗಡಿಯಾರವನ್ನು ಹಿಂದಕ್ಕೆ ತಿರುಗಿಸಿ ಪುತ್ಥಳಿಯೊಳಗೆ ಆ ಜೀವವನ್ನು ಸೇರಿಸಿ, ಸೀತಮ್ಮನ ತಲೆಯೊಳಗಿನ ಭ್ರಮೆಯನ್ನು ನಿವಾರಿಸುವುದು.

ಈ ಎಲ್ಲ ಕೆಲಸಗಳೂ ನಿರ್ವಿಘ್ನವಾಗಿ ನಡೆದವು. ಧ್ಯಾನಮಗ್ನನಾಗಿದ್ದ ಬ್ರಹ್ಮದೇವನಿಗೆ ತಿಳಿಯದಂತೆ ಸರಸ್ವತಿಯು ಗಡಿಯಾರವನ್ನು ಹಿಂದಕ್ಕೆ ತಿರುಗಿಸಿ, ಕಾರ್ಯ ಸಾಧನೆಯಾದ ಮೇಲೆ ಮೊದಲಿನ ಸಮಯಕ್ಕೆ ಓಡಿಸಿ, ತನ್ನ ವೀಣಾವಾದನವನ್ನು ಮುಂದುವರೆಸಿಕೊಂಡಳು. ರಾಮಯ್ಯನ ಮನೆಯಲ್ಲಿ ಪುತ್ಥಳಿಯು ಜೀವ ಪಡೆದು ಓಡಾಡಿತು. ಮುಕ್ತಮನಸ್ಸಿನಿಂದ ಶಾಲೆಯ ಬಗ್ಗೆ ಸಮಾಲೋಚನೆ ನಡೆಸುವಲ್ಲಿ ಗಡಿಯಾರ ಪುನಃ ಪ್ರಾರಂಭವಾಯಿತು.

ಹೀಗೆ ದೊಡ್ಡದೊಂದು ಕಾರ್ಯಯೋಜನೆ ಯಶಸ್ವಿಯಾಯಿತು.

ಈ ದೀರ್ಘ ಅಟ್ಯಾಚ್‌ಮೆಂಟನ್ನು ಮುಗಿಸುವಾಗ ವಿಷ್ಣುವಿಗೆ ಅದರ ಬಗ್ಗೆ ಇನ್ನಷ್ಟು ವಿವರಗಳು ಬೇಕೆನಿಸಿದವು. ನಾರದನನ್ನೇ ಕರೆಸಿ, ಆಮುಂದೆ ಸತ್ಯಲೋಕದಲ್ಲಿ ಏನು ನಡೆಯಿತೆಂದು ತಿಳಿಸಬೇಕೆಂದನು. ನಾರದನ ವರದಿ ಹೀಗಿತ್ತು.

ಬ್ರಹ್ಮದೇವನ ಆಪ್ತ ಕಾರ್ಯದರ್ಶಿ ಬಂದು ಹೆದರುತ್ತಾ ನಿಂತನು. ಆತನ ಚಹರೆಯನ್ನು ಕಂಡ ಬ್ರಹ್ಮನ ಭೃಕುಟಿಗಳು ಮೇಲೇರಿದವು. ಕಾರ್ಯದರ್ಶಿಯು ಅತ್ಯಂತ ವಿನಯದಿಂದ, ದೇಹವನ್ನು (ತೊಂಬತ್ತು ಡಿಗ್ರಿ ಕೋನದಲ್ಲಿ) ಬಾಗಿಸಿ "ಜೀವದ ಕಳುವಾಗಿದೆ" ಎಂದನು. ಬ್ರಹ್ಮನು, "ಡಾಲಿ ಎಂಬ ಕುರಿಯ ವಿಷಯವೇ?" ಎನ್ನಲು, ಕಾರ್ಯದರ್ಶಿಯು, "ಅದಲ್ಲ; ಇನ್ನೊಂದು ಜೀವ; ಇದು ಮನುಷ್ಯ ದೇಹವನ್ನು ಪಡೆದು ಕೊಂಡು ಬಿಟ್ಟಿದೆ" ಎಂದಂದು (90 ಡಿಗ್ರಿಗೆ) ಬಾಗಿದನು. ದಿವ್ಯದೃಷ್ಟಿಯಿಂದ ಮಗುವನ್ನು ಕಂಡ ಬ್ರಹ್ಮನು ಅದರ ಹುಟ್ಟನ್ನೂ ತಿಳಿದನು. ವೀಣಾವಾದನದಲ್ಲಿ ಮಗ್ನಳಾಗಿದ್ದ ಸರಸ್ವತಿಯತ್ತ (ಗಡಿಯಾರವನ್ನು ಮುಟ್ಟಿ ಏನೂ ತಿಳಿಯದಂತೆ ಕುಳಿತಿದ್ದೀಯಾ ಎಂಬಂತೆ) ಎಂಟೂ ಕಣ್ಣಿಂದ ದುರುಗುಟ್ಟಿ ನೋಡಿದನು. ತತ್‌ಕ್ಷಣವೇ ತನ್ನ ಕೈಗಳಿಂದಲೇ ಕಾಗದವನ್ನು ಬರೆದು ಕಾರ್ಯದರ್ಶಿಗೆ ಕೊಟ್ಟನು. ಶ್ರೀಮನ್ನಾರಾಯಣನ ಭೃಕುಟಿಗಳೀಗ ಮೇಲೇರಿದವು. ಕಾಗದ ಬಹಳ ಸ್ಪಷ್ಟವಾಗಿತ್ತು.

"ಡಾಲಿ ಎಂಬುದರ ಸೃಷ್ಟಿಯ ಹಗರಣ ಮುಗಿಯುತ್ತಿರುವಾಗಲೇ ಹೀಗೊಂದು ಹೊಸ ಹಗರಣ ತಲೆ ಎತ್ತಿದೆ. ಇದರಲ್ಲಿ ನಮ್ಮೆಲ್ಲರ ಕುಟುಂಬದ ಸದಸ್ಯರು ಭಾಗಿಗಳಾಗಿರುವುದರಿಂದ ಇದು ರಾಜಕೀಯ ತಿರುವು ಪಡೆಯಲಿದೆ. ಆದ್ದರಿಂದ ನಾನು ರಾಜೀನಾಮೆ ನೀಡುತ್ತಿದ್ದೇನೆ."

ತಲೆಯ ಮೇಲೆ ಕೈಹೊತ್ತ ವಿಷ್ಣುವಿನ ಕಿರೀಟ ಬೀಳುವುದನ್ನು ತಡೆದ ನಾರದ ಮುನಿಯು, "ಚಿಂತೆ ಬೇಡ ಪ್ರಭು. ಇದಕ್ಕೊಂದು ಪರಿಹಾರವನ್ನು ನಾನು ಭೂಲೋಕದಿಂದ ಹುಡುಕಿದ್ದೇನೆ" ಎಂದನು. ಮುಂದುವರೆಸಿ, "ಕಾರ್ಯಬಾಹುಳ್ಯದಿಂದ ಉಂಟಾಗುತ್ತಿರುವ ಒತ್ತಡವನ್ನು ಹಂಚಿಕೊಳ್ಳಲು ಬ್ರಹ್ಮದೇವನಿಗೆ ನೆರವಾಗುವಂತೆ ಸರಸ್ವತಿದೇವಿಯವರಿಗೆ ಈಗಲೇ ಆದೇಶ ಕಳಿಸಿ ಇದರಿಂದ ಹಗರಣ ಮುಕ್ತಾಯವಾಗುತ್ತದೆ" ಎಂದನು.

"ಅದು ಹೇಗೆ?" ಎಂದು ವಿಷ್ಣುವು ಕೇಳಲು, "ಇಂತಹುದೇ ಸಂದಿಗ್ಧ ಪರಿಸ್ಥಿತಿಯಲ್ಲಿ ಸತಿಯ ಸಹಕಾರ ಪಡೆದುಕೊಂಡ ಮಂತ್ರಿಯೊಬ್ಬನು ಇಂದು ಅತ್ಯಂತ ಸಮರ್ಥ ಮಂತ್ರಿ ಎಂಬ ಹೆಗ್ಗಳಿಕೆ ಗಳಿಸಿದ್ದಾನೆ. ಆತನ ಹಗರಣಗಳನ್ನೆಲ್ಲಾ ಜನತೆ ಕ್ಷಮಿಸಿಬಿಟ್ಟಿದೆ" ಎಂದನು.

"ಆ ಮಹಾನುಭಾವನ ಹೆಸರೇನು?"

"ಲಾಲೂ ಪ್ರಸಾದ್' ಎಂದುಸುರಿದ ನಾರದ ಮುಗುಳ್ನಕ್ಕನು.

ಪಡುಕೋಣೆ ರಮಾನಂದರಾವ್ ಸ್ಮಾರಕ ಹಾಸ್ಯ ಲೇಖನ ಸ್ಪರ್ಧೆಯಲ್ಲಿ
ಮೂರನೇ ಬಹುಮಾನ ಪಡೆದ ಲೇಖನ

# ಸುಗ್ರಪ್ಪನ ಶಿಲಾವಿಗ್ರಹ

- ನಿರುಪಮಾ

"ಇತ್ತೀಚೆಗೆ ಬಂದ ನಮ್ಮ ದೇಶದ ಪ್ರಧಾನಿಗಳ್ಯಾರೂ ಅಷ್ಟು ಪ್ರಯೋಜ್ನ ಇಲ್ಲ ಬಿಡಿ ಪ್ಚ್!" ಎಂದು ಲೊಚಗುಟ್ಟುತ್ತ ಒಂದು ಕಾಮೆಂಟ್ ಬಿಸಾಕಿದ ಜಗ್ಗೇಶ್.

"ಯಾಕೆ?" ಎಂಬಂತೆ ರಾಜಣ್ಣ, ಲೋಕೇಶ ಅವನತ್ತ ನೋಡಿದರು.

ಅರವತ್ತು ವರುಷದ ಸ್ವಾತಂತ್ರ್ಯದ ಸಾಧನೆಗಳ ಒಂದು ದೊಡ್ಡ ಪಟ್ಟಿಯನ್ನೇ ಹಾಕಿದ್ದ ಪತ್ರಿಕೆಯನ್ನು ಮಡಚಿ ಜಗ್ಗೇಶ ಟೀಪಾಯ್ ಮೇಲಿಡುತ್ತಾ

"ನಮ್ಮ ದೇಶಕ್ಕೆ ಸ್ವಾತಂತ್ರ್ಯ ಬಂದ ಮೇಲೆ ಪ್ರಧಾನಿ ಆದ ಜವಹರಲಾಲ್ ನೆಹ್ರೂ ಅವರು ಒಂದು ಸ್ಲೋಗನ್ ಮಾಡಿದ್ರು. 'ಆರಾಮ್ ಹರಾಮ್ ಹೈ' ಅಂತ ಅದಕ್ಕೆ ಮುಂಚೆ ನಮ್ಮ ಸ್ವಾತಂತ್ರ್ಯ ಹೋರಾಟಗಾರರು "Do or Die' ಎಂದು ಹೇಳಿಕೊಂಡೇ ಚಳುವಳಿ ಮಾಡಿದರು. ನಂತರ ಪ್ರಧಾನಿಯಾಗಿ ಬಂದ ಲಾಲ್‌ಬಹದ್ದೂರ್ ಶಾಸ್ತ್ರಿ 'ಜೈ ಜವಾನ್! ಜೈ ಕಿಸಾನ್!' ಅಂತ ಅಂದ್ರು. ಅದೂ ಚೆನ್ನಾಗಿಯೇ ಪ್ರಚಾರವಾಯ್ತು. ಆಮೇಲೆ ಬಂದ ಇಂದಿರಮ್ಮನವ್ರು.... ಜ್ಞಾಪಿಸಿ ಕೊಳ್ಳುತ್ತ ತಲೆ ಕೆರೆದು ಕೊಳ್ಳತೊಡಗಿದ ಜಗ್ಗೇಶ.

ಅವನ ಅವಸ್ಥೆ ನೋಡಿ ರಾಜಣ್ಣ

ಹೂ, ಸರಿ ಆಕೇನೂ 'ಲೂಪ್ ಈಸ್ ದಿ ಓನ್ಲೀ ಹೋಪ್' (Loop is the only hope) ಅನ್ನೋಥರದ್ದು ಏನೋ ಒಂದು ಹೇಳಿರಬಹುದು ಬಿಡು. ಹೋಗಲಿ, ಆ ಸ್ಲೋಗನ್ ನಿಂದ ಆಗೋ ಪ್ರಯೋಜ್ನ ಏನು?"

ಬೇಕಾದಷ್ಟು ಈಗ ನೋಡಿ ಸತ್ಯಸಾಯಿ ಭಕ್ತರು ಒಬ್ಬರನ್ನೊಬ್ಬರು ಕಂಡಾಗ "ಸಾಯಿರಾಂ!" ಅಂತ ಅಭಿನಂದಿಸಿ ಕೊಳ್ತಾರೆ. ತಿರುಪತಿ ತಿಮ್ಮಪ್ಪನ ಭಕ್ತರು "ಹರೇ ಶ್ರೀನಿವಾಸ!" ಅಂತಾರೆ. ಹೀಗೆ ಸ್ಲೋಗನ್ ಹೇಳಿ ಪರಸ್ಪರರನ್ನು ಅಭಿನಂದಿಸಿಕೊಳ್ಳಬಹುದ್ದು.

ಈ ರೀತಿ ಸ್ಲೋಗನ್ ಹೇಳಿದವ್ರ ತಮ್ಮ ಪಾರ್ಟಿ ಅಂತ ಗುರುತಿಸಬಹುದು. ಭಾರಿ ಸಮಾರಂಭಗಳಲ್ಲಿ ಈ ಸ್ಲೋಗನ್‌ನ ಗಟ್ಟಿಯಾಗಿ ಕೂಗಿಕೊಂಡ ಗುಂಪು ತಮ್ಮ ಪರವಾಗಿದೆ ಅಂತ ಈ ಸ್ಲೋಗನ್ ಮಾಡಿದೋರು ಗುರುತಿಸೋಕೆ ಅವಕಾಶ ಇರುತ್ತೆ. ನನ್ನ ಕೇಳಿದ್ರೇ ಏನಾದರೊಂದು ಪದವಿಗೆ ಬಂದ ಕೂಡಲೇ ಪ್ರತಿಯೊಬ್ಬ ನಾಯಕರೂ ಮಾಡಬೇಕಾದ ಮುಖ್ಯ ಕೆಲಸಗಳೆರಡು. ಒಂದು-ತಮ್ಮದೇ ಆದ ಒಂದು ಸ್ಲೋಗನ್ ಮಾಡಿ ಆದಷ್ಟು ಅದನ್ನ ಪ್ರಚಾರಕ್ಕೆ ಬರೋ ಹಾಗೆ ಮಾಡೋದು, ಇನ್ನೊಂದು ತಮ್ಮ ಹೆಸರು ಶಾಶ್ವತವಾಗಿರಲೀಂತ

ಒಂದು ಶಿಲಾಪ್ರತಿಮೆಯನ್ನು ಸ್ಥಾಪಿಸಿಕೊಳ್ಳೋದು. ಈ ಎರಡರಲ್ಲಿ ಯಾವುದನ್ನು ಮರೆತರೂ ಅಧಿಕಾರ ಇದ್ದೂ ಇದ್ದಂತಿಲ್ಲ ಆಗುತ್ತೆ ಅಷ್ಟೆ''

ತಟ್ಟನೆ ನುಡಿದ ಯೋಗೇಶ.

''ಹಾಂ... ಶಿಲಾ ಪ್ರತಿಮೆ ಅಂದ ಕೂಡಲೇ ನಮ್ಮೂರಲ್ಲಿ ನಡೆದ ಒಂದು ಘಟನೆ ನೆನಪಿಗೆ ಬರುತ್ತೆ.''

''ಏನದು?'' ಎಂದು ಗೆಳೆಯರಿಬ್ಬರೂ ಒಟ್ಟಿಗೆ ಕೇಳಿದರು. ಯೋಗೇಶ ಹೇಳತೊಡಗಿದ. ನಮ್ಮೂರು ಒಂದು ತಾಲ್ಲೂಕು ಕೇಂದ್ರ. ಅಲ್ಲಿ ಸುಗ್ರಪ್ಪ ಅಂತ ಒಬ್ಬ ಆಸಾಮಿ ಇದ್ದ. ಸಮಾಜ ಸೇವೆ ಮಾಡ್ತೀನೀಂತ ಓಡಾಡಿ. ಬಹಳ ವರ್ಷಗಳ ಮೇಲೆ ಅವರಿವರ ಕೈಕಾಲು ಹಿಡಿದು ಕೊನೆಗೊಂದು ದಿನ ನಮ್ಮೂರಿನ ಮುನಿಸಿಪಲ್ ಛೇರ್ಮನ್ ಆದ. ಎಲ್ಲರೂ ಅವನನ್ನು ಸುಗ್ರಪ್ಪನವರ್ ಎಂದು ಕರೆಯಲಾರಂಭಿಸಿದರು.

ಒಂದು ದಿನ ಆತ ತನ್ನ ಆಂತರಂಗಿಕ ಹಿತೈಷಿಗಳನ್ನು ಕರೆದು ''ನಾನು ಬಾಳ ವರುಷಗಳಿಂದ ಈ ಊರಿಗೆ ಸೇವೆ ಮಾಡ್ತಾ ಬಂದಿದೀನಿ. ಈಗ ಮುನ್ಸಿಪಲ್ ಛೇರ್ಮನ್ ಸಹ ಆಗಿದ್ದೀನಿ. ನಾನಿಷ್ಟು ವರುಷ ಪಟ್ಟ ಕಷ್ಟಾನ, ನನ್ನ ನಿಷ್ಕಾಮ ಸೇವೆಯನ್ನು ಈ ಊರಿನ ಜನ ಮರಿಬಾರದೂಂತ ನಿಮಗನ್ಸಲ್ವಾ?'' ಎಂದು ಕೇಳಿದ.

ಅದಕ್ಕೆ 'ಹೌದು, ಹೌದು' ಎಂದು ಅಲ್ಲಿದ್ದವರೆಲ್ಲ ತಲೆ ಆಡಿಸಿದರು.

''ಊರಿನ ಹಿರಿಯರನ್ನ ಗೌರವಿಸದ ಈ ಊರಿನ ಜನ ಸಹೃದಯರಲ್ಲ ಅನ್ನೋ ಅಪವಾದ ನಮ್ಮ ಪ್ರಜೆಗಳಿಗೆ ಬರಬಾರದು ಅಂತ ನನ್ನ ಇಚ್ಛೆ. ಇದಕ್ಕೆ ಒಂದೇ ದಾರಿ. ನಾನು ನನ್ನ ಜೀವನವನ್ನೆಲ್ಲ ಈ ಊರಿನ ಪ್ರಜೆಗಳ ಸೇವೆಗೆ ಮೀಸಲಾಗಿಟ್ಟು ದುಡಿದದ್ದಕ್ಕೆ ಮುಂದಿನ ತಲೆಮಾರಿನವರಿಗೆ ಮಾದರಿ ಎನ್ನಿ ಅಥವಾ ನನ್ನ ಮೇಲಿನ ಗೌರವ ಅನ್ನಿ. ಏನಾದರೂ ಸರಿ, ನನ್ನ ಶಿಲಾಪ್ರತಿಮೆಯೊಂದನ್ನು ಸ್ಥಾಪಿಸೋಕೆ ನೀವೆಲ್ಲರೂ ನಿರ್ಧಾರ ತೊಕೊಂಡು ಒಂದು ಪ್ರಶಸ್ತವಾದ ಜಾಗದಲ್ಲಿ ನನ್ನ ಶಿಲಾಪ್ರತಿಮೆ ಸ್ಥಾಪಿಸ್ತೀರ ಅಂತ ನಂಬಿದೀನಿ'' ಎಂದು ತಮ್ಮ ಆಸೆಯನ್ನು ಮುಂದಿಟ್ಟ.

ಸುಗ್ರಪ್ಪ ಹೇಳಿದ್ದು ಅವರ ಹಿತೈಷಿಗಳಿಗೂ ಸರಿ ಎನಿಸಿ ಕೂಡಲೇ ಒಪ್ಪಿಕೊಂಡರು, ಆದರೆ ಅದಕ್ಕೆ ಬೇಕಾದ ಹಣ ಕೊಡುವವರು ಯಾರು? ಅದಕ್ಕೆ ಸುಗ್ರಪ್ಪನೇ ಸಲಹೆ ಇತ್ತ.

''ಮೊದಲಿಗೆ ನೀವು ಒಂದು ಪ್ರತಿಷ್ಠಾನ ಅಂತ ಒಂದು ಸಂಘ ಮಾಡಿಕೊಂಡು ಊರಿನ ಸಾಪ್ಕಾರರ ಹತ್ರ ಚಂದಾವಸೂಲು ಮಾಡಿ. ಇನ್ನು ಐದುವರುಷ ನಾನಿಲ್ಲಿ ಮುನಿಸಿಪಲ್ ಛೇರ್ಮನ್ ಅಧಿಕಾರದಲ್ಲಿರ್ತೀನಂತ ಎಲ್ಲರಿಗೂ ಗೊತ್ತಿರೋದ್ರಿಂದ ಸುಲಭವಾಗಿ ಚಂದಾ ಹಣ ವಸೂಲಾಗುತ್ತೆ. ಒಂದು ವೇಳೆ ಆ ಹಣ ಸಾಕಾಗ್ದೇ ಹೋದ್ರೆ ಏನಾದ್ರೂ ಮಾಡಿದರಾಯ್ತು.'' ಎಂದು ಭರವಸೆ ಇತ್ತ ಸುಗ್ರಪ್ಪ.

ಕೂಡಲೇ ಸುಗ್ರಪ್ಪನ ಹಿತೈಷಿಗಳೂ, ಸುಗ್ರಪ್ಪನಿಂದ ತಮ್ಮ ಹಿತ ಬಯಸಿಕೊಂಡವರೂ ಸೇರಿ, ''ಸುಗ್ರಪ್ಪನವರ್ ಶಿಲಾಪ್ರತಿಮಾ ಸ್ಥಾಪಕ ಪ್ರತಿಷ್ಠಾನ'' ಎಂಬ ಸಂಘ ಸ್ಥಾಪಿಸಿಕೊಂಡು ಕಾರ್ಯವನ್ನಾರಂಭಿಸಲು ನಿಶ್ಚಯಿಸಿದರು.

ನಂತರ ಬಂದ ಸಮಸ್ಯೆ ಎಂದರೆ ಆ ಶಿಲಾವಿಗ್ರಹವನ್ನು ಯಾವ ಜಾಗದಲ್ಲಿ ಸ್ಥಾಪಿಸಬೇಕು? ಎಂಬುದು. ಒಬ್ಬೊಬ್ಬರು ಒಂದೊಂದು ಜಾಗ ಸೂಚಿಸಿದರು. ಕೊನೆಗೆ ಆ ಊರಿನ ಮೂರು ಸಿನಿಮಾ ಹಾಲುಗಳಿದ್ದ ನಾಲ್ಕುರಸ್ತೆ ಕಲೆಯುವಲ್ಲಿ ಆ ಪ್ರತಿಮೆಯನ್ನು ಸ್ಥಾಪಿಸಿ ಅದಕ್ಕೆ 'ಸುಗ್ರಪ್ಪನವರ್ ವೃತ್ತ' ಎಂದು ಹೆಸರಿಡಲು ನಿಶ್ಚಯಿಸಿದರು. ಆ ಸಂಘದ ಸದಸ್ಯರೆಲ್ಲರೂ ಚಂದಾ ವಸೂಲಿಗಾಗಿ ಹೊರಟರು. ಮೊಟ್ಟಮೊದಲಿಗೆ ಮೊದಲಿದ್ದ ಸಿನಿಮಾ ಥೇಟರಿನ ಯಜಮಾನನ ಬಳಿಗೆ ಹೋದರು, ಆತನಿಗೆ ತಮ್ಮ ಉದ್ದೇಶವನ್ನು ವಿವರಿಸಿ ಹೇಳಿ ಉದಾರವಾಗಿ ಧನಸಹಾಯ ಮಾಡುವಂತೆ ವಿನಂತಿಸಿಕೊಂಡರು. ಆತ ಎಲ್ಲ ಕೇಳಿ,

''ಚಂದಾಕೊಡೋಕೆ ನನ್ನದೇನೂ ಅಡ್ಡಿ ಇಲ್ಲ ಬಿಡಿ. ಹತ್ತು ಸಾವಿರ ರೂಪಾಯಿ ಕೊಡ್ತೀನಿ. ಆದರೆ ನನ್ನದೊಂದು ಕಂಡೀಷನ್. ನೀವು ಸ್ಥಾಪಿಸಲಿರುವ ಶಿಲಾಪ್ರತಿಮೆ 'ನಮ್ಮ ಸಿನಿಮಾ ಹಾಲಿಗೆ ಹೋಗು' ಎಂದು ಸೂಚಿಸುತ್ತಿರುವಂತೆ ನೀವು ಸ್ಥಾಪಿಸಬೇಕು. ಎಂದರೆ ಶಿಲಾಪ್ರತಿಮೆಯ ಕೈ ನಮ್ಮ ಹಾಲಿನ ಕಡೆಗೆ ತೋರಿಸುವಂತಿರಬೇಕು.'' ಎಂದು ಖಡಾಖಂಡಿತವಾಗಿ ಹೇಳಿಬಿಟ್ಟ ಆ ಥೇಟರಿನ ಒಡೆಯ.

''ಸರಿ, ನೀವು ಹೇಳಿದ ಕಂಡೀಷನ್ ಬಗ್ಗೆ ಯೋಚ್ನೆ ಮಾಡ್ತೀವಿ'' ಎಂದು ಹೇಳಿ, ಅವರೆಲ್ಲರೂ ಎರಡನೇ ಸಿನಿಮಾ ಹಾಲಿನ ಯಜಮಾನನ ಬಳಿಗೆ ಹೋದರು. ಮೊದಲನೇ ಥೇಟರಿನ ಒಡೆಯ ಹಾಕಿದ ಕಂಡೀಷನ್ ಇವನಿಗೆ ತಿಳಿದಿತ್ತು. ಎರಡನೇ ಥೇಟರಿನ ಯಜಮಾನ ಸಹ ಇದೇ ಕಂಡೀಷನ್ ಹಾಕಿದ. ಕೊನೆಗೆ ಮೂರನೇ ಥೇಟರಿನ ಯಜಮಾನ ಸಹ ಇದೇ ಕಂಡೀಷನ್ ಎಂದು ಕರಾರುವಾಕ್ಕಾಗಿ ನುಡಿದುಬಿಟ್ಟ

ಸು.ಶಿ.ಸ್ಥಾ. ಪ್ರತಿಷ್ಠಾನದ ಸದಸ್ಯರಿಗೆ ತಲೆ ಬಿಸಿಯಾಯಿತು. ಹೋಗಲಿ ಎರಡೂ ಸಿನಿಮಾ ಹಾಲ್‌ಗಳ ಕಡೆಗೆ ಸುಗ್ರಪ್ಪನ ಎರಡೂ ಕೈಗಳನ್ನು ತೋರಿಸುವಂತೆ ಮಾಡಬಹುದು. ಆದರೆ ಆ ಮೂರನೇದಕ್ಕೆ?'' ತಲೆ ಕೆರೆದುಕೊಂಡರು.

''ನಮ್ಮ ಸುಗ್ರಪ್ಪ ಚಿಕ್ಕಂದಿನಲ್ಲಿ ಭರತನಾಟ್ಯ ಕಲಿತು ನಾಟಕದಲ್ಲಿ ವೇಷ ಹಾಕ್ಕಿದ್ದಂನಂತಲ್ಲ, ಆ ಭರತನಾಟ್ಯದ ಭಂಗಿಯಲ್ಲೇ ಒಂದು ಕಾಲನ್ನ ಅತ್ತ ಕಡೆ ತೋರಿಸುವಂತೆ ಮಾಡಿದರೇ?....''

''ನಟರಾಜನ ವಿಗ್ರಹದ ಹಾಗೆ'' ದನಿಗೂಡಿಸಿದ ಒಬ್ಬ

''ಛೇ! ಛೇ! ಎಲ್ಲಾದರೂ ಉಂಟೆ? ಕಾಲನ್ನ ಸಿನಿಮಾ ಹಾಲಿನತ್ತ ತೋರಿಸ ಕೂಡದು. ಹಾಗೇನಾದ್ರೂ ತೋರಿಸಿದ್ರೆ ''ಆ ಸಿನಿಮಾ ಹಾಲಿಗೆ ಹೋದರೆ ಒದೀತೀನಿ ನೋಡು'' ಅಂತ ಅರ್ಥ ಆಗುತ್ತೆ. ಅದರಿಂದ ನಮಗೆ ಆ ಕಾಲಿನ ಸುದ್ದೀನೇ ಬೇಡ.'' ಎಂದರು ಹಿರಿಯರೊಬ್ಬರು.

''ನಮಗಂತೂ ವಿಗ್ರಹದ ಬಲಗೈ ಬೇಕೇ ಬೇಕು'' ಎಂದು ಖಡಾಖಂಡಿತವಾಗಿ ಹೇಳಿ ಬಿಟ್ಟ ಮೊದಲನೇ ಥೇಟರಿನ ಒಡೆಯ. ಉಳಿದಿಬ್ಬರೂ ತಮಗೂ ಬಲಗೈಯೇ ಬೇಕೆಂದು ಹಠಹಿಡಿದು ಕುಳಿತಿದ್ದಾರೆ. ಸದಸ್ಯರಿಗೆ ದಿಕ್ಕು ತೋರದಾಯಿತು.

ಒಬ್ಬ ಮನುಷ್ಯನಿಗೆ ಮೂರು ಬಲಗೈ ಇರೋದಕ್ಕೆ ಹೇಗೆ ಸಾಧ್ಯ? ಹಾಗಿದ್ದರೇ ಮೂರು ಎಡಗೈ ಸಹ ಇರಬೇಕಾಗುತ್ತದಲ್ಲಾ?'' ಎಂದ ಸದಸ್ಯನೊಬ್ಬ.

ಹಾಗೊಂದು ವೇಳೆ ವಿಗ್ರಹಕ್ಕೆ ಆರು ಕೈಗಳನ್ನಿಟ್ಟರೇ ಅದು ದತ್ತಾತ್ರೇಯನದೋ ಅಥವಾ ಯಾವುದೋ ದೇವತಾವಿಗ್ರಹವಾಗುತ್ತದೆಯೇ ಹೊರತು ಸುಗ್ರಪ್ಪನದಾಗುವುದಿಲ್ಲ. ಒಂದು ವೇಳೆ ಮೂರು ಬಲಗೈಗಳನ್ನೇ ಇಟ್ಟು ಮೂರು ಸಿನಿಮಾ ಹಾಲುಗಳ ಕಡೆಗೆ ತೋರಿಸುವಂತಿಟ್ಟರೇ ಆಗ ಮೂರು ಎಡಗೈ ಏನುಮಾಡಬೇಕು?'' ಎಂದು ಸಂಶಯ ಹೊರಗೆಡಹಿದ ಮತ್ತೊಬ್ಬ ಸದಸ್ಯ.

''ಹೋಗಲಿ, ಹೀಗೆ ಮಾಡೋಣ. ಬಲಗೈಯನ್ನು ಹರಾಜು ಹಾಕಿ ಯಾರು ಅತಿ ಹೆಚ್ಚಿನ ಹಣ ಕೊಡ್ತಾರೋ ಅವರ ಕಡೆ ಇಡಿಸಿದರಾಯ್ತು'' ಎಂದು ಒಬ್ಬ ಶೆಟ್ಟಿ ಸಲಹೆ ಇತ್ತ.

''ಛೇ! ಹಾಗೆ ಮಾಡೋದ್ರಿಂದ ಅನಾಹುತವಾಗಿಬಿಡುತ್ತೆ. ನಿಮಗೇ ಗೊತ್ತಲ್ಲ, ನಮ್ಮ ದೇಶದಲ್ಲಿ ಏನೋ ಒಂದು ಚಳುವಳಿ ನಡೀತಾನೇ ಇರುತ್ತೆ. ಇಂಥಾ ಪರಿಸ್ಥಿತಿಯಲ್ಲಿ ಉಳಿದ ಎರಡು ಥೇಟರ್ನೋರು ಯಾವ್ದೋ ಚಳುವಳಿಗಾರರ ಜೊತೆ ಸೇರಿ ನಮ್ಮ ಪ್ರತಿಮೆಯನ್ನೇ ಉರುಳಿಸಿಬಿಡೋ ಸಾಧ್ಯತೆ ಇರತ್ತೆ. ಆದ್ದರಿಂದ ಎಲ್ಲರಿಗೂ ಅನುಕೂಲ ಆಗೋ ಹಾಗೆ ಪ್ರತಿಮೆಯ ಸ್ಥಾಪನೆಯಾಗಬೇಕೇ ಹೊರತು ಯಾರಿಗೂ ನಷ್ಟ ಆಗೋ ಹಾಗೆ ಮಾಡಬಾರ್ದು.'' ಎಂದು ಹಿರಿಯರೊಬ್ಬರ ಉವಾಚ.

ಆಗ ಸು.ಶಿ.ಸ್ಥಾ. ಪ್ರತಿಷ್ಠಾನದವರು ಈ ಸಮಸ್ಯೆಗೆ ಪರಿಹಾರ ಹುಡುಕಲು ಒಂದು ಉಪಸಮಿತಿಯನ್ನು ನೇಮಕ ಮಾಡಿದರು. ನಂತರ ಉಪಸಮಿತಿಯ ಸದಸ್ಯರು ಮೂರು ಸಿನಿಮಾ ಥೇಟರಿನ ಒಡೆಯರೊಂದಿಗೆ ಸಮಾಲೋಚಿಸಿ ಕೆಳಕಂಡ ಸೂಚನೆಗಳನ್ನು ಪ್ರತಿಷ್ಠಾನದ ಸಮಿತಿಗೆ ಒಪ್ಪಿಸಿದರು. ಹಾಗೆ ಒಪ್ಪಿಸುವಾಗ ಸ್ವಯಂ ಸುಗ್ರಪ್ಪನವರೇ ಸೇರಿಸಿದ ಸೂಚನೆಯೊಂದನ್ನು ಸಹ ಸೇರಿಸಿದರು. (12 ನೇ ನಂಬರಿನ ಸೂಚನೆ).

1. ಸುಗ್ರಪ್ಪನವರ್ ಪ್ರತಿಮೆಗೆ ಎರಡು ಕೈಗಳು ಮಾತ್ರ ಇರಲಿ.
2. ಬಲಗೈ 'ಅತ್ತ ಕಡೆಗೆ ಹೋಗಿ' ಎಂದು ತೋರುವಂತಿರಬೇಕು.
3. ಎಡಗೈ ಮಾಮೂಲಿನಂತಿರಲಿ.
4. ಶಿಲಾಪ್ರತಿಮೆಯನ್ನು ಒಂದು ವೇದಿಕೆಯ ಮೇಲೆ ಸ್ಥಾಪಿಸತಕ್ಕದ್ದು.
5. ಆ ವೇದಿಕೆ ನೆಲಕ್ಕೆ ಅಂಟಿಕೊಂಡಿರಬಾರದು.
6. ವೇದಿಕೆಯ ಅಡಿಗೆ ಒಂದು ಚಕ್ರವನ್ನಳವಡಿಸಿ ಯಾವ ದಿಕ್ಕಿಗೆ ಬೇಕೆಂದರೆ ಆ ದಿಕ್ಕಿಗೆ ತಿರುಗಿಸುವಂತಿರಬೇಕು.
7. ಆ ವೇದಿಕೆಯನ್ನು ಮನಸ್ಸಿಗೆ ಬಂದಂತೆ ತಿರುಗಿಸಲು ಸಾಧ್ಯವಾಗದಂತೆ ಅದರ ಸುತ್ತಲೂ ಆರು ಕಡೆ ಚೈನುಗಳನ್ನು ಬಿಗಿದು ನೆಲದ ಕೊಂಡಿಗಳಿಗೆ ಸೇರಿಸಿ ಆರು ಬೀಗಗಳನ್ನು ಹಾಕುವಂತಿರಬೇಕು.
8. ಅದರ ಮೂರು ಬೀಗದ ಕೈಗಳು ಮೂವರು ಥೇಟರಿನ ಒಡೆಯರ ಕೈಯಲ್ಲೂ ಉಳಿದ ಮೂರು ಸಂಘದ ಸದಸ್ಯರ ಬಳಿ ಇರತಕ್ಕದ್ದು.

ಶಿಲಾ ಪ್ರತಿಮೆಯ ಬಲಗೈಯನ್ನು ಒಂದೊಂದು ತಿಂಗಳಿಗೆ ಒಂದೊಂದು ಥೇಟರಿನ ಕಡೆ ತೋರಿಸುವಂತೆ ತಿರುಗಿಸಲಾಗುತ್ತದೆ.

10. ಪ್ರತಿ ತಿಂಗಳ ಮೊದಲನೆ ತಾರೀಖು ಮೂರು ಥೇಟರುಗಳ ಯಜಮಾನರೂ ಪ್ರತಿಷ್ಠಾನದ ಸದಸ್ಯರೂ ಸಮಾವೇಶಗೊಂಡು ಬೀಗ ತೆಗೆದು ಯಾವ ದಿಕ್ಕಿಗೆ ಬೇಕೋ ಆ ದಿಕ್ಕಿನ ಕಡೆಗೆ ತಿರುಗಿಸುವುದು.


11. ಮೊಟ್ಟಮೊದಲ ತಿಂಗಳು ಯಾವ ಸಿನಿಮಾ ಹಾಲಿನ ಕಡೆ ಸುಗ್ರಪ್ಪನವರ್ ಬಲಗೈ ತೋರುವಂತಿರಬೇಕೆಂಬುದನ್ನು ಲಾಟರಿ ಮೂಲಕ ನಿರ್ಧರಿಸಲಾಗುತ್ತೆ.

12. ಕಡೆಯದಾಗಿ ಸುಗ್ರಪ್ಪನವರ್ ಶಿಲಾ ವಿಗ್ರಹದ ಶಿರದ ಮೇಲೆ ಒಂದು ಅಡಿ ಎತ್ತರದಲ್ಲಿ ಚಚ್ಚೌಕ ಛಾವಣಿಯೊಂದನ್ನು ಅಳವಡಿಸಬೇಕು. ಆಗಸದಲ್ಲಿ ಹಾರಾಡುವ ಹಕ್ಕಿಗಳ ಹಿಕ್ಕೆಗಳಾಗಲೀ, ಪುಂಡು ಹುಡುಗರು ಸುರಿಯುವ ಮಧ್ಯವಾಗಲೀ ಅವರ ತಲೆಯ ಮೇಲೆ ಬೀಳದಂತೆ ಅದು ರಕ್ಷಿಸುತ್ತದೆ.

ಹೀಗೆ ಉಪಸಮಿತಿಯವರಿತ್ತ ಸೂಚನೆಗಳು ಸಮರ್ಪಕವಾಗಿವೆ ಎಂದು ಎಲ್ಲರೂ ಒಪ್ಪಿಕೊಂಡರು."

ಎಂದು ತನ್ನ ಮಾತು ಮುಗಿಸಿ ಸಿಗರೇಟ್ ಹಚ್ಚಿದ ಯೋಗೇಶ. ರಾಜಣ್ಣ ತಟ್ಟನೆ ನುಡಿದ.

"ಹೀಗೆ ಮಾಡೋದ್ರಲ್ಲಿ ಆ ಸುಗ್ರಪ್ಪ ಸಾಯೋಕೆ ಮುಂಚೇನೆ ಅವನ ವಿಗ್ರಹ ಜಖಂ ಆಗಿರತ್ತೆ ಬಿಡು" ಎಂದಾಗ ಮೂವರೂ ನಕ್ಕರು.



ಚೆನ್ನಾಗೇನೋ ಇದೆ, ಆದ್ರೆ ವಾರೆಂಟೀ, ಕಸ್ಟಮರ್ ಸಪೋರ್ಟ್ ಇಲ್ದೆ ಇದನ್ನ ಮಾರುಕಟ್ಟೆಗೆ ಬಿಡುಗಡೆ ಮಾಡೋಹಾಗಿಲ್ವಲ್ಲಾ

*ಹುರುಳಿ ಕಟ್ಟು......*

# ಪ್ರೈಸು ಇನ್ನೂ ಇದೆಯಾ ?.....

**- ಎಚ್.ಗೋಪಾಲಕೃಷ್ಣ**

ನಾನು ಕೆಲಸ ಮಾಡುವ ಭಾರತ್ ಎಲೆಕ್ಟ್ರಾನಿಕ್ಸ್ ಸಂಸ್ಥೆ ದೇಶದ ರಕ್ಷಣಾ ಉತ್ಪಾದನೆಯಲ್ಲಿ ತೊಡಗಿಸಿಕೊಂಡಿದೆ. ದೇಶ ರಕ್ಷಣೆಯ ಸಂಗಡವೇ ಒಂದು ರೀತಿಯ ಸಾಮಾಜಿಕ ಬದ್ಧತೆಗೂ ತನ್ನನ್ನು ಮುಡುಪಾಗಿಸಿಕೊಂಡಿದೆ. ಸಾಮಾಜಿಕ ಜಾಗೃತಿ ಬೇರೆ ಕಡೆಗಳಿಗೆ ಹೋಲಿಸಿದರೆ ಹೆಚ್ಚಿರುವುದರಿಂದಲೋ ಏನೋ ಸುಮಾರು ಹೊಸ ಹೊಸ ಐಡಿಯಾಗಳನ್ನು ಇಲ್ಲಿ ನಾವು ಜಾರಿಗೊಳಿಸಲು ಪ್ರಯತ್ನ ಪಡುತ್ತಲೇ ಇರುತ್ತೇವೆ.

ಇಂತಹ ಪ್ರಯತ್ನಗಳ ಮೂಲಕವೇ ನಮ್ಮ ಸಂಸ್ಥೆ ಒಂದು ಶಿಕ್ಷಣ ಸಮೂಹವನ್ನೂ ಇತರ ಕೆಲಸಗಳೊಂದಿಗೆ ನಡೆಸಿಕೊಂಡು ಬರುತ್ತಿದೆ. ಅದರ ಜತೆಗೆ ಬೇರೆ ಬೇರೆ ಪ್ರಾಂತ್ಯಗಳಿಂದ ಬಂದಿರುವ ಉದ್ಯೋಗಿಗಳು ಅವರ ಭಾಷೆ ಮತ್ತು ಸಂಸ್ಕೃತಿಯನ್ನು ಮರೆಯದಿರುವಂತೆ ಒಂದು ಲಲಿತ ಕಲಾ ಸಂಘವೂ ಇದ್ದು ಅದರಡಿಯಲ್ಲಿ ಒಂಬತ್ತು ವಿವಿಧ ಭಾರತೀಯ ಭಾಷೆಗಳ ಸಂಘಟನೆಗಳು ತಮ್ಮ ಕಾರ್ಯ ನಿರ್ವಹಿಸುತ್ತಿವೆ. ಶಿಕ್ಷಣ ಸಮೂಹದಲ್ಲಿ ಏಳು ವಿದ್ಯಾಸಂಸ್ಥೆಗಳು ಕಾರ್ಯನಿರ್ವಹಿಸುತ್ತಿದ್ದು ಸುತ್ತಮುತ್ತಲಿನ ಆರ್ಥಿಕವಾಗಿ ಹಿಂದುಳಿದ ಜನಸಮುದಾಯ ಇದರ ಪೂರ್ಣ ಪ್ರಯೋಜನವನ್ನು ಪಡೆದುಕೊಳ್ಳುತ್ತಿದ್ದಾರೆ.

ಬುದ್ಧಿಮಾಂದ್ಯ ಮಕ್ಕಳಿಗಾಗಿ ಎಂದೇ ಒಂದು ವಿಶೇಷ ಶಾಲೆಯನ್ನು 25 ವರ್ಷಗಳ ಹಿಂದೆ ಇಲ್ಲಿ ತೆರೆಯಲಾಯಿತು. ತರಬೇತಿ ಪಡೆದ ವಿಶೇಷ ತಜ್ಞ ಉಪಾಧ್ಯಾಯರು ಇಲ್ಲಿ ಸ್ವಯಂ ಪ್ರೇರಿತರಾಗಿ ಬಂದು ಕಾರ್ಯನಿರ್ವಹಣೆ ಮಾಡಿದ್ದರಿಂದ ಈ ಶಾಲೆ ಈಗ ಬಲವಾಗಿ ಬೇರು ಬಿಟ್ಟಿದ್ದು ಸುಮಾರು ಅರವತ್ತು ಮಕ್ಕಳು ಇಲ್ಲಿ ಶಿಕ್ಷಣ ಪಡೆಯುತ್ತಿದ್ದಾರೆ ಮತ್ತು ಇವರಲ್ಲಿ ಬಹುಪಾಲು ವಿದ್ಯಾರ್ಥಿಗಳು ನಮ್ಮ ಉದ್ಯೋಗಿಗಳ ಮಕ್ಕಳು ಅಲ್ಲ.

ಮೊನ್ನೆ ಅಂದರೆ ಕಳೆದ ವರ್ಷ ಲಲಿತ ಕಲಾ ಸಂಸ್ಥೆಯ ಅಂಗ ಸಂಸ್ಥೆಯಾದ ಕನ್ನಡ ಸಾಹಿತ್ಯ ಕೂಟ ಸುವರ್ಣ ಮಹೋತ್ಸವವನ್ನು ಆಚರಿಸಿತು. ಅದರ ಅಂಗವಾಗಿ ಹಲವಾರು ಸ್ಪರ್ಧೆಗಳನ್ನು ಏರ್ಪಡಿಸಿತ್ತು. ಬುದ್ಧಿಮಾಂದ್ಯ ಮಕ್ಕಳಿಗಾಗಿಯೂ ಸ್ಥಳದಲ್ಲಿಯೇ ಚಿತ್ರ ರಚನಾ ಸ್ಪರ್ಧೆಯನ್ನೂ ಹಮ್ಮಿಕೊಂಡಿತ್ತು. ಸುಮಾರು ಮಕ್ಕಳು ಸ್ಪರ್ಧೆಯಲ್ಲಿ ಭಾಗವಹಿಸಿದ್ದವು.

ಬಹುಮಾನ ವಿತರಣಾ ಸಮಾರಂಭದ ದಿವಸ - ಈ ಮಕ್ಕಳೂ ಬಂದು ಕುಳಿತಿದ್ದವು. ಬಹುಮಾನ ವಿತರಣೆ ಶುರುವಾಯಿತು. ಬುದ್ಧಿಮಾಂದ್ಯ ಮಕ್ಕಳ ಪಟ್ಟಿ ಓದುತ್ತಿರಬೇಕಾದರೆ ಒಂದು ಪುಟ್ಟ ಮಗು ಕಿವಿತೆರೆದು ವಿಜೇತರ ಪಟ್ಟಿ ಆಲಿಸುತ್ತಾ ಕುಳಿತಿತ್ತು. ಮೊದಲನೇ ಬಹುಮಾನ ಘೋಷಣೆಯಾದ ಕೂಡಲೇ ಪಕ್ಕದಲ್ಲಿಯೇ ಇದ್ದ ಹಿರಿಯ ಹೆಂಗಸಿನ ಸಂಗಡ ಆಂಟೀ ಇನ್ನೂ ಪ್ರೈಜು ಇದೆಯಾ? ಅಂತ ಕೇಳಿತು. ಎರಡನೇದು ಅನೌನ್ಸ್ ಆದ ಮೇಲೆಯೂ ಇದೇ ಪ್ರಶ್ನೆ. ಮೂರನೆದು ನಂತರ ಸಮಾಧಾನಕರ ಬಹುಮಾನವೂ ಅನೌನ್ಸ್ ಆಯಿತು.

ಪ್ರತಿ ಸಲವೂ ಮಗು ಇನ್ನೂ ಪ್ರೈಜ಼್ ಇದೆಯಾ? ಅಂತ ಕೇಳುತ್ತಲೇ ಇತ್ತು. ಸಮಾಧಾನಕರ ಬಹುಮಾನವೂ ಆದಮೇಲೆ ಆಂಟೀ ಇನ್ನೂ ಪ್ರೈಜ಼್ ಇದೆಯಾ? ಅಂತ ಮತ್ತೆ ಕೇಳಬೇಕೇ?

ಮಗು ಆಗಲೇ ಒಂದು ಬಹುಮಾನ ತೆಗೆದುಕೊಂಡಿತ್ತು. ಇನ್ಯಾವುದಾದರೂ ಬಹುಮಾನವನ್ನ ಇದು ನಿರೀಕ್ಷೆ ಮಾಡುತ್ತಿದೆಯೋ ಅಂತ ಆಂಟೀಗೆ ಸಂದೇಹ ಬಂತು.

ಮರೀ ಇನ್ನು ಯಾವ ಪ್ರೈಜು ಬರಬೇಕು ನಿನಗೆ ಅಂತ ಆಂಟಿ ಕೇಳಿದರು.

ನನಗಲ್ಲ ಆಂಟೀ ನನ್ನ ಪಕ್ಕದಲ್ಲೇ ಕೂತು ರೇಷ್ಮ ಒಂದು ಬೊಂಬೆ ಬರೀತು-ಅವತ್ತು. ಅವಳಿಗೆ ಪ್ರೈಜು ಬಂದಿಲ್ಲವಾ ಅಂತ ಕೇಳಿದೆ....... ಅಂತ ಮಗು ಉತ್ತರಿಸಿತು!

ಆಂಟಿ ಕಣ್ಣಿನಲ್ಲಿ ನೀರು ಬಂದುಬಿಟ್ಟಿತಂತೆ. ಎಲ್ಲಾ ಸರಿಯಾಗಿರೋ ಮಕ್ಕಳು ತನ್ನದು ಮಾತ್ರಾ ನೋಡಿಕೊಂಡು ಸಂತೋಷ ಪಟ್ಟುಕೊಂಡು ಹೋಗಿಬಿಡುತ್ತವೆ, ಆದರೆ ಈ ಮಗು ನೋಡಿ ಅವನದ್ದಕ್ಕಿಂತಾ ಹೆಚ್ಚಾಗಿ ಪಕ್ಕದಲ್ಲಿ ಕೂತು ಬೊಂಬೆ ಬರೀತಲ್ಲಾ ಅದಕ್ಕೆ ಪ್ರೈಜು ಬಂದಿಲ್ಲವಾ ಅಂತ ಯೋಚಿಸುತ್ತೆ, ಪ್ರೈಜು ಬಂದಿಲ್ಲವಾ ರೇಷ್ಮಾಗೆ ಅಂತ ಕೇಳಿತು. ಇಂಥಹ ಬುದ್ಧಿ, ಬುದ್ಧಿ ಸರಿಯಾಗಿದೆ ಅಂತ ಅಂದುಕೊಳ್ಳುತ್ತೀವಲ್ಲಾ ಅಂತಹ ಮಕ್ಕಳಲ್ಲೂ ಇರುಲ್ಲ... ಅಂತ ಆಂಟಿ ಕಣ್ಣು ಒರೆಸಿಕೊಳ್ಳುತ್ತಾ ಹೇಳಿದರು.

ಮಗು ಪ್ರಶ್ನೆ ಆಂಟಿ-ಇವರ ಹೆಸರು ಕಮಲಾ ಅಂತ- ಮನಸ್ಸಿನಲ್ಲಿ ಹಲವಾರು ಬಾರಿ ಎದ್ದೆದ್ದು ಕುಣೀತು.

ಕಳೆದ ತಿಂಗಳ ಮೊದಲನೇ ವಾರ ಶಾಲೆಯಲ್ಲಿರುವ ಎಲ್ಲಾ ಮಕ್ಕಳಿಗೂ ಕಮಲ ಬಣ್ಣ ಬಣ್ಣದ ಕಾಗದದಲ್ಲಿ ಪ್ರೈಜು ಪ್ಯಾಕ್ ಮಾಡಿಸಿ ತಂದರು. ಬಣ್ಣ ಬಣ್ಣದ ಕಾಗದ ನೋಡಿದರೇ ಎತ್ತಿ ಪಕ್ಕದಲ್ಲಿಟ್ಟು ಕೊಳ್ಳಬೇಕು ಅನ್ನುವ ಹಾಗಿದ್ದವ - ನಮಗೇನೇ. ನೇರ ಶಾಲೆಗೆ ನಡೆದು ಒಂದೊಂದೇ ಮಗೂನ ಹೆಸರು ಹಿಡಿದು ಕರೆದರು. ಕರೆದು ಅವರ ಕೈಯಲ್ಲಿ ಪ್ಯಾಕ್ ಮಾಡಿದ ಪ್ರೈಜು ನೀಡಿದರು. ರೇಷ್ಮಾ ಸಹ ಬಂದಳು ಪ್ರೈಜು ತೆಗೆದುಕೊಂಡಳು. ಹೆಚ್ಚು ಹೊತ್ತು ಚಪ್ಪಾಳೆಯನ್ನ ಇನ್ನೂ ಪ್ರೈಜು ಇದೆಯಾ ಅಂತ ಕೇಳಿದ್ದ ಮಗು ಹೊಡೀತು.

ಪ್ರೈಜು ಕೊಟ್ಟು ಶಾಲೆಯಿಂದ ಆಚೆ ಬಂದರು. ಅವರ ಕಣ್ಣಂಚಿನಲ್ಲಿಯೂ ಒಂದು ಹನಿ ನೀರು ಎದ್ದು ಕಾಣಬೇಕೇ?

ಚುನಾವಣೆಯ ಸಮಯ : ಅಭ್ಯರ್ಥಿ ಭರ್ಜರಿ ಭಾಷಣ ಬಿಗಿದು ಸಭಿಕರನ್ನು ಪ್ರಭಾವಿತಗೊಳಿಸಿದ. ಪ್ರೇಕ್ಷಕರಲ್ಲೊಬ್ಬ ಎದ್ದು "ನಿಮ್ಮ ಭಾಷಣ ಅದ್ಭುತವಾಗಿತ್ತು. ಎಲ್ಲ ಬುದ್ಧಿವಂತರೂ ನಿಮಗೇ ಓಟು ಹಾಕುತ್ತಾರೆ" ಎಂದ.

ಆಗ ಅಭ್ಯರ್ಥಿ ಹೇಳಿದ: "ಆದರೆ ಗೆಲ್ಲಲು ಬಹುಮತ ಬೇಕಲ್ಲ".

# ವಿದ್ಯಮಾನಗಳು

- ಕು.ಕ.

ಚರಿತ್ರೆ ಮರುಕಳಿಸುತ್ತದೆ- ಎರಡನೆಯ ಬಾರಿ ಒಂದು ಕೆಟ್ಟ ನಾಟಕದ ರೂಪದಲ್ಲಿ ಎನ್ನುವ ಒಂದು ಮಾತಿದೆ. ಈಗ 30-40 ವರ್ಷಗಳ ಹಿಂದೆ ಒಬ್ಬ ವ್ಯಂಗ್ಯ ಚಿತ್ರಕಾರ, ಸ್ವಯಂ ಘೋಷಿತ ಮರಾಠಿ ಹುಲಿ ಬಾಲ್ ಠಾಕ್ರೆ ದಕ್ಷಿಣ ಭಾರತೀಯರೆ ಮುಂಬೈ ಬಿಟ್ಟು ತೊಲಗಿ ಎಂದು ಹುಲಿಯಂತೆ ಹೂಂಕರಿಸಿದ್ದರು. ಮುಂಬೈ ಮಹಾನಗರದಲ್ಲಿ ಚಿಕ್ಕಪುಟ್ಟ ಕೆಲಸ ಮಾಡಿಕೊಂಡು ಬದುಕುತ್ತಿದ್ದ ಈ ಮದ್ರಾಸಿ ಮಂದಿ ಥರಥರ ನಡುಗಿದರು. ಆದರೂ ಮುಂಬೈ ಬಿಟ್ಟು ಹೋಗಲು ಬೇರೆ ಯಾವ ಜಾಗವಿಲ್ಲದ್ದರಿಂದ ಅಲ್ಲೇ ನಡುಗುತ್ತಲೇ ಉಳಿದರು. ಬಾಲಾ ಸಾಹೇಬರ ಮಂದಿಗೆ ಅಧಿಕಾರವೇನೋ ಸಿಕ್ಕಿತು. ಆದರೆ ಅದನ್ನು ಉಳಿಸಿಕೊಳ್ಳುವ ವಿವೇಕವಿರಲಿಲ್ಲ. ಈಗ ಆ ಹುಲಿಯ ಹಲ್ಲುಗಳೆಲ್ಲಾ ಬಿದ್ದು ಹೋಗಿವೆ. ಹುಲಿಯಂತೆ ಘರ್ಜಿಸುವ ಪ್ರಯತ್ನ ಬೆಕ್ಕಿನ ಮಿಯಾಂವಿನಂತೆ ಕೇಳಿಸುತ್ತದೆ. ಆ ಹುಲಿಯ ಗುಹೆಯಲ್ಲಿ ಯಾದವ ಕಾಳಗ. ಮಗ ಮತ್ತು ಅಣ್ಣನ ಮಗನ ನಡುವೆ ಹಣಾಹಣಿ.

ಅಣ್ಣನ ಮಗನ ಕಡೆಯವರು ಆ ಹುಲಿಯ ಅಂದಿನ ಹಳೆ ನಾಟಕವನ್ನು ಈಗ ಹೊಸ ಡ್ರೆಸ್ ಹೊಸ ಸೀನರಿಗಳೊದಿಗೆ ಮತ್ತೆ ಆಡಲು ಹೊರಟಿದ್ದಾರೆ. ಚೂರು ಬದಲಾವಣೆ ಬೇಕಲ್ಲ. ಹಿಂದಿನ ದಕ್ಷಿಣ ಭಾರತೀಯರ ಜಾಗದಲ್ಲಿ ಈಗ ಹಾಲು ಮಾರಿಕೊಂಡು, ಟ್ಯಾಕ್ಸಿ ಓಡಿಸಿಕೊಂಡು ಬದುಕುತ್ತಿರುವ ಉತ್ತರ ಭಾರತೀಯರು- ಉತ್ತರ ಪ್ರದೇಶ ಬಿಹಾರಗಳಿಂದ ಬಂದವರ ಭಯ್ಯಾಲೋಗ್. ಇಲ್ಲಿ ಒಂದು ವಿನಾಯಿತಿ. ಮಾಯಾವತಿಯ ಮಂದಿ ಮುಂಬೈನಲ್ಲೇ ಉಳಿಯಲು ಮರಾಠಿ ಮಾನಸ್ ಅನುಮತಿಕೊಟ್ಟಿದೆ. ಏಕೆ ಗೊತ್ತೆ? ಮಾಯಾವತಿ ಶಾಹು ಮಹಾರಾಜ್, ಜ್ಯೋತಿ ಫುಲೆ, ಡಾ. ಅಂಬೇಡ್ಕರ್ ಅವರುಗಳಿಗೆ ತಮ್ಮ ರಾಜ್ಯದಲ್ಲಿ ಗೌರವ ತೋರಿಸಿದ್ದಾರೆ ಎನ್ನುವ ಕಾರಣಕ್ಕೆ! ಈ ಪ್ರಹಸನ ನೋಡುತ್ತಿರುವಾಗ ಒಂದು ಸಮಾಧಾನ. ರೀಮೇಕ್ ಯಾವಾಗಲೂ ಫ್ಲಾಪ್ ಆಗುತ್ತದೆ. ರಾಜ್ ನಿರ್ದೇಶನದ ಹೊಸ ಈ ನಾಟಕ ನಾಲ್ಕೇ ದಿನಗಳಲ್ಲಿಯೇ ಗೋತಾ ಹೊಡೆಯಲೇ ಬೇಕು.

★★★

ಭಾರತೀಯ ರೈಲ್ವೆಯಲ್ಲಿ ನಾಲ್ಕನೆಯ ದರ್ಜೆಯ ಜನ- ಗ್ಯಾಂಗ್‌ಮೆನ್‌ಗಳು. (ಇಲ್ಲಿ ಗ್ಯಾಂಗ್‌ವಿಮೆನ್‌ಗಳು ಇಲ್ಲ ಎನ್ನುವುದು ನಮ್ಮ ಸ್ತ್ರೀವಾದಿಗಳ ಗಮನಕ್ಕೆ ಬಂದಂತಿಲ್ಲ, ಇರಲಿ.) ಈ ಜನರ ಕೆಲಸ ರೈಲುಡಬ್ಬಿಗಳ ಮತ್ತು ಕಂಬಿಗಳ ದೈನಂದಿನ ಶುಶ್ರೂಷೆ. ಅಂದರೆ ಪ್ರಯಾಣಕ್ಕೆ ಹೊರಟಿರುವ ರೈಲು ಕೋಚುಗಳಲ್ಲಿನ ಮತ್ತು ಪ್ರಯಾಣ ಮಾಡುವ ದಾರಿಯಲ್ಲಿ ಕಂಬಿಗಳನ್ನು ಸೇರಿಸಿರುವ ಬೋಲ್ಟುಗಳು ಮತ್ತು ನಟ್ಟುಗಳು ಬಿಗಿಯಾಗಿವೆ ಎಂದು ತಪಾಸಣೆ ಮಾಡಿ ಅಳ್ಳಕವಾಗಿದ್ದ ನಟ್ಟುಗಳನ್ನು ಬಿಗಿಮಾಡುವುದು. ಎರಡು ಕೆಜಿ ತೂಕದ ಸ್ಪ್ಯಾನರ್ ಹಿಡಿದು ಓಡಾಡುವ, ದೂರದಲ್ಲಿ ಕಂಬಿಗಳಲ್ಲಿ ಏನಾದರೂ ಐಬಿದ್ದರೆ ಬೇಗ ಬಂದು ವರದಿ

ಮಾಡುವಷ್ಟು ದೇಹದಾರ್ಢ್ಯ ಇರುವ ಯಾರೂ ಬೇಕಾದರೂ ಮಾಡಬಹುದಾದ ಈ ಕೆಲಸಕ್ಕೆ ಈಗ ಅಖಿಲ ಭಾರತದ ಮಟ್ಟದಲ್ಲಿ ನೇಮಕಾತಿ! ಲಿಖಿತ ಪರೀಕ್ಷೆ ಇಂಟರ್‌ವ್ಯೂ ಇತ್ಯಾದಿ ಇತ್ಯಾದಿ. ಇದು ಕರ್ನಾಟಕದ ಬಾಗಲಕೋಟೆ ರೈಲ್ವೇ ಸ್ಟೇಷನ್ನಿನ ಗ್ಯಾಂಗ್‌ಮನ್ ಹುದ್ದೆಗೆ ಬಿಹಾರದ ಬಾಗಲಪುರದ ಲಲ್ಲುವನ್ನೋ ಪಂಜುವನ್ನೋ ನೇಮಿಸಿಕೊಳ್ಳುವ ರೈಲ್ವೇ ಮಂತ್ರಿಗಳ ಹುನ್ನಾರ ಎಂದು ಜನರ ನಂಬಿಕೆ. ಇಂತಹ ಕೆಲಸ ಮಾಡಲು ಸ್ಥಳದ ಜನರೇ ಯೋಗ್ಯರು, ಬಾಗಲಕೋಟೆ ಗ್ಯಾಂಗ್‌ಮನ್ ಬಾಗಲಕೋಟೆ ಸುತ್ತಮುತ್ತಲಿನವನೇ ಆಗಿದ್ದರೆ ಸರ್ವರಿಗೂ ಕ್ಷೇಮ ಎಂದು ಹೇಳುವ ಧೈರ್ಯವೂ ನಮಗಿಲ್ಲ. ಬದಲು ಇಂತಹ ಹುದ್ದೆಗಳಲ್ಲಿ ಕನ್ನಡಿಗರಿಗೆ ಕೋಟಾ ಕೊಡಿ ಎಂದು ಕೈಮುಗಿದು ಬೇಡಿಕೊಳ್ಳುತ್ತಿದ್ದೇವೆ!

★★★

ನಮ್ಮ ಮನೆಯ ಹಿರಿಯರೊಬ್ಬರು ಆಗಾಗ ಕೆಲಸವಿಲ್ಲದ ಬಡಗಿ ಅದೇನೋ ಮಾಡಿದಹಾಗಾಯ್ತು ಎನ್ನುವ ಗಾದೆ ಹೇಳುತ್ತಿದ್ದರು. ಆದರೆ ಆ ಬಡಗಿ ಏನು ಮಾಡಿದ ಎನ್ನುವುದನ್ನು ಎಂದೂ ಸ್ಪಷ್ಟ ಪಡಿಸುತ್ತಿರಲಿಲ್ಲ. (ಮುಂದೆ ಆ ಗಾದೆಯ ಪೂರ್ಣ ಪಾಠವೇನೋ ಗೊತ್ತಾಯಿತು ಆದರೆ ಅದನ್ನು ಇಲ್ಲಿ ತಿಳಿಸಲು ಸಂಪಾದಕರು ಅವಕಾಶ ಕೊಡುವುದಿಲ್ಲ.) ಮೊನ್ನೆ ಯಾರೋ ಮೈಸೂರಿನ ರಾಜಕಾರಣಿ ಎಂದಿನದೋ ಹಳೆ ಸುದ್ದಿಯನ್ನು ತಮ್ಮ ಪುಸ್ತಕದಲ್ಲಿ ಸೇರಿಸಿ ವಿವಾದಕ್ಕೆ ಸಿಕ್ಕಿಕೊಂಡಾಗ ಈ ಗಾದೆ ಜ್ಞಾಪಕಕ್ಕೆ ಬಂದಿತು. ರಾಷ್ಟ್ರಪತಿಗಳ ಆಡಳಿತ ಬಂದಿತು. ನಮ್ಮ ರಾಜಕಾರಣಿಗಳು ಕೆಲಸವಿಲ್ಲದ ಬಡಗಿಗಳಾದರು. ಏನಾದರೂ ಮಾಡುತ್ತಿರಲೇ ಬೇಕಲ್ಲ. ಈ ರಾಜಕಾರಣಿ ಒಂದು ಪುಸ್ತಕ ಬರೆದರು. ಇಂತಹವರೇ ಇನ್ನೊಬ್ಬರು ಇದನ್ನು ಬಿಡುಗಡೆ ಮಾಡಿದರು. ಅವರಂತೆಯೇ ಕೆಲಸವಿಲ್ಲದ ಇನ್ನಷ್ಟು ಬಡಗಿಗಳು ಈ ಪುಸ್ತಕವನ್ನು ಟೀಕಿಸಿದರು, ಇದನ್ನು ಬ್ಯಾನ್ ಮಾಡಿ ಎಂದು ಗಲಾಟೆ ಮಾಡಿದರು. ಒಟ್ಟಾರೆ ಎಲ್ಲರೂ ನಾಲ್ಕು ದಿನ ಮಾಧ್ಯಮಗಳಲ್ಲಿ ಮೆರೆದರು. ಈಗ ಚುನಾವಣೆ ಇನ್ನೂ ಮುಂದೆ ಹೋಗಿದೆ. ನಮಗೆ ಇನ್ನಷ್ಟು ಇಂತಹ ನಾಟಕಗಳನ್ನು ನೋಡಲೇಬೇಕಾದ ಕರ್ಮ.

★★★

ಆಗಾಗ ಸರ್ಕಸ್ ಚಾರ್ಲಿಯಂತೆ ಮಂಗಾಟ ಮಾಡಿದರೇನು? ರೈಲು ಮಂತ್ರಿ ಲಾಲು ಪ್ರಸಾದ್ ನಮ್ಮ ಇಂದಿನ ಅತ್ಯಂತ ಚಾಣಾಕ್ಷ ರಾಜಕಾರಣಿ. ಆದರೆ ನಾವು ಕನ್ನಡ ಮಂದಿ ಇದನ್ನು ಅರ್ಥಮಾಡಿಕೊಂಡಂತೆ ಕಾಣುವುದಿಲ್ಲ. ಲಾಲು ಪ್ರಸಾದ್ ಕನ್ನಡಿಗರನ್ನು ಅಥವ ಬೇರೆ ಯಾವುದೇ ಸಮುದಾಯವನ್ನು ಡರ್ಟಿ ಫೆಲೋಸ್ ಎಂದು ಕರೆಯುವಷ್ಟು ಹುಂಬರಲ್ಲ. ಒಂದು ಪಕ್ಷ ನಿಜವಾಗಿಯೂ ಹೇಳಿದ್ದರೆ ಅದನ್ನು Return to the sender - ಕಳುಹಿಸಿದವರಿಗೆ ಹಿಂದಿರಿಗಿಸಿ ಎಂದು ಷರಾ ಬರೆದು ನೆಮ್ಮದಿಯಿಂದ ಇರಬಹುದಲ್ಲವೇ?

# ಕೊರವಂಜಿ ಮತ್ತು ಅಪರಂಜಿಗಳ ಸಮಗ್ರ ಗಣಕೀಕರಣ

ಕೊರವಂಜಿ ಮತ್ತು ಅಪರಂಜಿ ಪತ್ರಿಕೆಗಳ ಮೊದಲ ಸಂಚಿಕೆಯಿಂದ ಇಲ್ಲಿನವರೆಗೆ ಪ್ರಕಟವಾಗಿರುವ ಎಲ್ಲ ಸಂಚಿಕೆಗಳನ್ನೂ ಗಣಕೀಕರಿಸಿ, ಸೂಚಿ, ಅನುಸೂಚಿಗಳನ್ನು ಅಳವಡಿಸಿ ಒಂದು ಸಿಡಿ ರೂಪದಲ್ಲಿ ಹೊರತರುವ ಯೋಜನೆ ನಮ್ಮ ಮುಂದಿದೆ. ಎರಡೂ ಪತ್ರಿಕೆಗಳ ಇಪ್ಪತ್ತೈದು ವರ್ಷಗಳ ಸಂಚಿಕೆಗಳು ಬಹು ಮಟ್ಟಿಗೆ ನಮ್ಮಲ್ಲಿ ಲಭ್ಯವಿದ್ದರೂ ಕೆಳಗೆ ನಮೂದಿಸಿರುವ ಸಂಚಿಕೆಗಳು ಕಳೆದುಹೋಗಿವೆ.

ಕೊರವಂಜಿ: ಮೇ, ಜೂನ್, ಜುಲೈ 1950 ಮತ್ತು ಜನವರಿ, ಫೆಬ್ರುವರಿ, ಮಾರ್ಚ್ 1951

ಅಪರಂಜಿ: ಅಕ್ಟೋಬರ್ 1993 ಮತ್ತು ಜನವರಿ 1994

ನಮ್ಮ ಓದುಗ ಬಾಂಧವರಲ್ಲಿ ಈ ಮೇಲಿನ ಯಾವುದಾದರೂ ಸಂಚಿಗೆಗಳು ಲಭ್ಯವಿದ್ದಲ್ಲಿ, ದಯವಿಟ್ಟು ನಮ್ಮನ್ನು ಸಂಪರ್ಕಿಸಿದರೆ ಬಹಳ ಉಪಕಾರವಾಗುತ್ತದೆ. ಸಂಪರ್ಕ ವಿವರ: email: aparanji@hotmail.com, (Mobile) 9845825061

ಪತ್ರಿಕೆಗಳನ್ನು ಕ್ಸೆರಾಕ್ಸ್ ಮಾಡಿಸಿಕೊಂಡು ಜೋಪಾನವಾಗಿ ತಮಗೆ ಹಿಂತಿರುಗಿಸುವ ಭರವಸೆ ನೀಡುತ್ತೇವೆ. ನಿಮ್ಮ ಸಹಕಾರವನ್ನು ಬೇಡುವ,

ಶಿವಕುಮಾರ್
ಸಂಪಾದಕರು, ಅಪರಂಜಿ

# ಶುಭಾಶಯಗಳೊಂದಿಗೆ

## ಪ್ರಭಾ ಕಣ್ಣಿನ ಆಸ್ಪತ್ರೆ

ಮತ್ತು

## ಸಂಶೋಧನಾ ಕೇಂದ್ರ

504, 40ನೇ ಅಡ್ಡರಸ್ತೆ, 7ನೇ ಬ್ಲಾಕ್,
ಜಯನಗರ, ಬೆಂಗಳೂರು - 560 070
ದೂರವಾಣಿ: 2634 4131, 41 / 2663 7041

ಮತ್ತು

## ವಿಠಲ ಅಂತರರಾಷ್ಟ್ರೀಯ ನೇತ್ರಶಾಸ್ತ್ರಸಂಸ್ಥೆ

ನಂ. 1, 2ನೇ ಅಡ್ಡರಸ್ತೆ, 2ನೇ ಮುಖ್ಯರಸ್ತೆ,
7ನೇ ಬ್ಲಾಕ್, ಬನಶಂಕರಿ 3ನೇ ಹಂತ,
ಹೊಸಕೆರೆಹಳ್ಳಿ, ಬೆಂಗಳೂರು - 560 085
ದೂರವಾಣಿ: 2672 2213/14/15/19

# ಕಾಫಿ ಹೌಸ್

ಮೊನ್ನೆ ಸಿದ್ಧಿ ವಿನಾಯಕ ಇಂಜಿನೀರಿಂಗ್ ಎಂಬ ಫ್ಯಾಕ್ಟರೀಗೆ ಹೋಗಬೇಕಾಗಿ ಬಂತು. ಚಚೌಕನೆ ಚಕ್ರದ ಸೈಕಲ್ ಒಂದನ್ನು ಮಾಡಲು ನಮ್ಮ ಅಗಸ್ತ್ಯ ಸಂಸ್ಥೆ ಅವರಿಗೆ ಆರ್ಡರ್ ಕೊಟ್ಟಿದ್ದರು. ಫ್ಯಾಕ್ಟರಿ ಒಳಕ್ಕೆ ಹೋದೊಡನೆಯೇ ಒಂದು ವಿಚಿತ್ರ ದೃಶ್ಯ ಕಣ್ಣಿಗೆ ಬಿತ್ತು. ಜೋಡಣೆ ಮಾಡುತ್ತಿದ್ದ ಕಾರ್ಮಿಕರಲ್ಲಿ ಅರ್ಧಕ್ಕರ್ಧದಷ್ಟು ಜನ ಅಂಗವಿಕಲರು. ನಾನು ಹುಬ್ಬೇರಿಸಿದ್ದು ಕಂಡು ಮಾಲಿಕ ವಿವರಿಸಿದ. 'ನಮ್ ಫ್ಯಾಕ್ಟರೀಲಿ ಕೆಲ್ಸ ಮಾಡೋರೆಲ್ಲ ಅಂಗವಿಕಲರು ಅಥವಾ ರ್‍ಯಾಗ್ ಪಿಕರ್ಸ್. ನಾನೇ ಅವರಿಗೆಲ್ಲಾ ಖುದ್ದಾಗಿ ತರಬೇತಿ ಕೊಟ್ಟು ಕೆಲಸ ಕೊಟ್ಟಿದೀನಿ. ಇವರು ಮಾಡೋ ಸರಕು ಫ್ರಾನ್ಸ್, ಬೆಲ್ಜಿಯಂ ದೇಶಗಳಿಗೆ ಹೋಗ್ತಾ ಇವೆ. ಹತ್ತು ವರ್ಷ ಆಯ್ತು, ಒಂದು ಲೇಬರ್ ಪ್ರಾಬ್ಲಂ ಇಲ್ಲ'.

ನಮ್ಮ ಸೈಕಲ್ ಚೆನ್ನಾಗಿ ಮೂಡಿ ಬಂದಿತ್ತು. 'ಭೇಷ್ ಬಷೀರ್, ಚೆನ್ನಾಗಿ ಮಾಡಿದ್ದೀರ. ಅಂದಹಾಗೆ ನಿಮ್ಮ ಫ್ಯಾಕ್ಟರಿ ಹೆಸ್ರು ....?'

'ನಮ್ ಹುಡುಗರ್ಗೆ ಐಡೆಂಟಿಫೈ ಮಾಡ್ಕೊಳ್ಳೋಕ್ಕೆ ಒಂದು ಸೂಟಬಲ್ಲಾಗಿರೋ ಹೆಸರು ಬೇಕಲ್ಲಾ ಸಾರ್' ಎಂದು ಉತ್ತರಿಸಿದ ಬಷೀರ್ ಅಹಮದ್.

**- ಶಿವು**

★★★

ಮೂರು ದಿನಗಳಲ್ಲಿ ಮುಗಿಯಬೇಕಾದ ಮ್ಯಾಜಿಕ್ ಬಾಕ್ಸ್ 30 ದಿನಗಳು ತೆಗೆದುಕೊಂಡಿದ್ದಕ್ಕೆ ಒಂದು ಸಣ್ಣ typographical error ಕಾರಣ ಎಂದು ಬಿಬಿಎಂಪಿ ಮೂಲಗಳು ತಿಳಿಸಿವೆ. ಆದುದರಿಂದ ಆ ವಿಳಂಬಕ್ಕೆ ಮಾಮೂಲಿ ರೆಡ್ ಟೇಪ್ ಅಥವಾ ರಿಕ್ಷಾಗಳಂತೆ ನಿಯಂತ್ರಿಸಲಾಗದ ವರುಣ ದೇವ ಕಾರಣ ಅಲ್ಲ ಎಂದು ಆ ಮೂಲಗಳು ಹೇಳಿವೆ. ಬಿಬಿಎಂಪಿಯಲ್ಲಿ ಈ ಯೋಜನೆ ಬಗ್ಗೆ ಪತ್ರಿಕಾ ಪ್ರಕಟಣೆ ಸಿದ್ಧಪಡಿಸುವಾಗ ಮ್ಯಾಜಿಕ್ ಬಾಕ್ಸ್ 720 ತಾಸುಗಳಲ್ಲಿ ಸಿದ್ಧವಾಗುತ್ತದೆ ಎಂದು ಟೈಪಿಸುವ ಬದಲು 72 ತಾಸು ಎಂದು ಟೈಪಿಸಿ ಕೇವಲ ಒಂದು ಸೊನ್ನೆಯನ್ನು ಕೈ ಬಿಟ್ಟಿದ್ದಕ್ಕೆ ಇಷ್ಟೆಲ್ಲ ಗೊಂದಲ ಸೃಷ್ಟಿಯಾಯಿತು. ಆದರೆ 72 ತಾಸುಗಳಲ್ಲೇ ಮುಗಿದಿದ್ದರೆ ಅದು ಮ್ಯಾಜಿಕ್ ಬಾಕ್ಸ್ ಅಲ್ಲ ಪವಾಡ ಬಾಕ್ಸ್ ಎಂದು ಹೇಳಬಹುದಿತ್ತು.

**- ಆನಂದ**

★★★

ಬಿಡುವು ಅಂತ ಸಿಕ್ಕೋದು ತುಂಬಾ ಅಪರೂಪ ನನಗೆ.ಆದರೆ ಸಮಯ ಇಲ್ಲ ಅಂತ ಯಾವ ಕೆಲಸವನ್ನೂ ಮುಂದಕ್ಕೆ ಹಾಕುವುದನ್ನ ಇನ್ನೂ ರೂಢಿಸಿಕೊಂಡಿಲ್ಲ. ಪ್ರತಿದಿನ ಮಲಗುವ ಮುನ್ನ ಒಂದು ಗಂಟೆ ಏನನ್ನಾದರೂ ಓದಲೇ ಬೇಕು ಅಂತ ಒಂದು ರೂಲು

ಮಾಡಿಕೊಂಡಿದೀನಿ ಮತ್ತು ಅವನ್ನ ಪಾಲಿಸಿಕೊಂಡು ಬರ್ತಾ ಇದೀನಿ. ಈ ಸದ್ಯಕ್ಕೆ ಇಗೋ ಕನ್ನಡ ನಾನು ಓದುತ್ತಿರುವುದು. ರಾತ್ರಿ ಮಲಗುವ ಮುನ್ನ ಓದುತ್ತೀನಲ್ಲಾ-ಅದರಲ್ಲಿ ಅದೇನು ಖುಷಿ ಸಿಗುತ್ತೆ ಗೊತ್ತಾ ? ನೀವೂ ಟ್ರೈ ಮಾಡಬಹುದೇನೋ....

**- ಎಚ್. ಗೋಪಾಲಕೃಷ್ಣ**

★★★

ಮೂವತ್ತು ವರುಷಗಳ ಹಿಂದಿನ ಮಾತು. ಒಮ್ಮೆ ನನ್ನ ಗೆಳೆಯನೊಂದಿಗೆ ತಿರುಪತಿಗೆ ಹೋಗಿದ್ದೆ. ಪ್ಯಾಂಟ್ ಜೇಬಿನಲ್ಲಿ ಹುಂಡಿಗೆ ಹಾಕಲು ನೂರು ರೂಪಾಯಿ ನೋಟು ಇತ್ತು. ಈಗಿನಂತೆ ಆ ದಿನಗಳಲ್ಲೂ ಧರ್ಮದರ್ಶನಕ್ಕೆ ಭಾರಿ ಕ್ಯೂ. ಸ್ವಲ್ಪ ದೂರ ನಡೆದ ಮೇಲೆ ಜೇಬಿಗೆ ಕೈ ಹಾಕಿದರೆ , ಜೇಬು ಖಾಲಿ. ನೋಟು ಎಲ್ಲಿಯೋ ಬಿದ್ದು ಹೋಗಿತ್ತು. ಗಾಬರಿಯಿಂದ ನನ್ನ ಸ್ನೇಹಿತನಿಗೆ ವಿಷಯ ತಿಳಿಸಿದೆ. ಆತ , 'ಹೋಗಲಿ ಬಿಡೋ. ಆ ನೋಟು ಯಾರಿಗೆ ಸಿಕ್ಕಿರತ್ತೋ ಅವರೇ ಅದನ್ನ ಹುಂಡಿಗೆ ಹಾಕ್ತಾರೆ ' ಅಂತ ಸಮಾಧಾನ ಮಾಡಿದ. ನನಗೆ ಸಮಾಧಾನವೇನೂ ಆಗಲಿಲ್ಲ. ಹಾಗೇ ಮುಂದೆ ನಡೆದಾಗ ಪಕ್ಕದವರು, 'ಸ್ವಾಮಿ, ನಿಮ್ಮ ನೋಟು,' ಅಂತ ನನ್ನ ಕಾಲ ಬಳಿ ತೋರಿಸಿದರು. ಅಲ್ಲೊಂದು ನೂರರ ನೋಟು. ಕುಂಕುಮದ ಕಲೆ ಇದ್ದುದರಿಂದ ಅದು ಬೇರೇ ಯಾರದ್ದೋ ಅಂತ ಖಂಡಿತವಾಗಿತ್ತು. ಗೆಳೆಯ 'ಹುಂಡಿ ದುಡ್ಡನ್ನು ಯಾರೋ ಬೀಳಿಸಿಕೊಂಡಿರಬೇಕು. ನೀನೇ ಹಾಕಿದರಾಯಿತು' ಅಂದ. ನಾನು ನೋಟನ್ನು ತೆಗೆದುಕೊಂಡು ಹುಂಡಿಗೆ ಹಾಕಿದೆ. ಮನಸ್ಸಿಗೆ ಒಂದು ರೀತಿಯ ಸಮಾಧಾನ ಮೂಡಿತು.

**- ಬೇಲೂರು ರಾಮಮೂರ್ತಿ**



**ನಮ್ಮಮ್ಮ ಖಂಡಿತಾ ಹೋಮ್‌ವರ್ಕ್ ಮಾಡ್ಕೊಡ್ಲಿಲ್ಲ ಮೇಡಂ,**
**ಬರೀ ಸಲಹೆಗಾರರನ್ನಾಗಿ ಅವರನ್ನ ಬಳಸ್ಕೊಂಡೆ ಅಷ್ಟೇ!**

# ಬಂಗಾಳಿ ಬೀಗ್ರು

**- ಲೋಕನಾಥ ದೀಕ್ಷಿತ್**

ಇವಳು ಕಂಪ್ಯೂಟರ್ ಮುಂದೆ ಇಮೇಲ್ ನೋಡುತ್ತಾ ಕುಳಿತಿದ್ದಳು. ''ರೀ.. ನಂ ಶಶಾಂಕ ಮೇಲ್ ಕಳಿಸಿದ್ದಾನೆ...'' ಕೂಗಿದಳು.

''ಅದ್ಯಾಕೆ ಹಾಗೆ ಕೂಗ್ತಿ, ನಿಧಾನವಾಗಿ ಕನ್ನಡಕ ಮೂಗಿನ ಮೇಲೆ ಏರಿಸಿ ನೋಡೂ...'' ಉತ್ತರಿಸಿದೆ.

''ಕಂಪ್ಯೂಟರ್ ಹಚ್ಚಕ್ಕೆ ಬರೋಲ್ಲಾ, ಲಾಗ್ ಆನ್ ಆಗೋಕೆ ಬರೋಲ್ಲಾ.. ನನಗೇ ಹೇಳಲಿಕ್ಕೆ ಬರ್ತಾರೆ...'' ಆ ಓದ್ತೀನಿ ತಡೀರಿ... ಓದಲು ಆರಂಭಿಸಿದಳು.

ಮನುಷ್ಯ ಅಂದ ಮೇಲೆ ಲಗ್ನ ಆಗಲೇ ಬೇಕು ಎಂದು ನೀವು ಹೇಳಿದ ಮಾತು ನೆನಪಿದೆ. ನೀವು ಕಳಿಸಿದ ಸಾಕಷ್ಟು ಫೋಟೋಗಳನ್ನು ನೋಡಿದ್ದೇನೆ. ಅವು ಯಾವುವೂ ನನ್ನ ಮನಸ್ಸಿಗೆ ಹಿಡಿಸಲಿಲ್ಲ, ಮದುವೆ ಆಗಬೇಕಾದವನು ನಾನು. ಜೀವನ ಪರ್ಯಂತ ಏಗಬೇಕಾದವನು ನಾನು. ನಾನು ನಿಮ್ಮಿಬ್ಬರನ್ನು ನೋಡಿದ್ದೇನೆ ನಿಮ್ಮಗಳ ಪ್ರಕಾರ, ಸಂಸಾರ ಅಂದರೆ ಹೆಂಡತಿ ಗಂಡನನ್ನ ಅನ್ನಬೇಕು. ಗಂಡ ನಾಯಿಯಂತೆ ಬಾಲ ಮುದುರಿಕೊಂಡು ಇರಬೇಕು. ಇದು ನನಗೆ ಇಷ್ಟವಿಲ್ಲ, ಹಾಗಾಗಿ ನಾನು ಹೇಳಿದಂತೆ ಕೇಳುವ, ಸುಂದರವಾದ, ಬಂಗಾಳಿ ಹುಡುಗಿಯನ್ನು ಪ್ರೀತಿಸಿದ್ದೇನೆ. ಈಕೆಯೂ ಸಹ ನನ್ನಂತೆ ಸಾಫ್ಟ್‌ವೇರ್ ಎಂಜಿನಿಯರ್. ಈಕೆಗೂ ನನ್ನಂತೆ ಎರಡು ಲಕ್ಷ ಸಂಬಳ.

ಈಕೆ ಸ್ವಲ್ಪ ದಪ್ಪ, ಹಲ್ಲುಬ್ಬು, ಕಪ್ಪು, ಮೆಳ್ಳಗಣ್ಣು ಉಳ್ಳವಳಾಗಿದ್ದಾಳೆ. ಆದರೂ ಸುಂದರವಾಗಿ ಇದ್ದಾಳೆ. ನಾನು ಅವಳು ಒಂದೇ ಕಂಪ್ಯೂಟರ್ ನಲ್ಲಿ ಕೆಲಸ ಮಾಡುತ್ತೇವೆ. ಇನ್ನೂ ಹೇಳಬೇಕೆಂದರೆ ಒಂದೇ ಇಲಿ (ಮೌಸ್) ಹಿಡಿದು ಕೆಲಸ ಮಾಡುತ್ತೇವೆ. ನಮ್ಮ ಪ್ರೀತಿಗೆ ಈ ನಮ್ಮ ಇಲಿಯೇ ಸಾಕ್ಷಿ ಮುಂದಿನ ತಿಂಗಳು ಬರುತ್ತಿದ್ದೇವೆ. ಲಗ್ನಕ್ಕೆ ಸಿದ್ದಮಾಡಿ'' ಕಾಗದ ಓದಿದಳು.

''ಏನ್ರೀ ನನ್ನ ಮಗ ಬೆಂಗಾಳಿ ಕನ್ಯೆನ ಆಗ್ತಾ ನಂತಲ್ರೀ...'' ಉದ್ಗಾರತೆಗೆದಳು.

''ಆಗ್ಲಿ ಬಿಡೇ... ಕಂಡೂ ಕಂಡೂ ನಿನ್ನಂಥ ಹುಡುಗಿನ ಆರಿಸಿಲ್ಲವಲ್ಲ ನನ್ನ ಮಗ... ಭಾವಿ ಸೊಸೆಗೆ ತಿಂಗಳಿಗೆ ಎರಡು ಲಕ್ಷ ಸಂಬಳಾ...'' ನನ್ನ ಅನಿಸಿಕೆ ಹೇಳಿದೆ.

''ಬಂಗಾಳಿಗಳು ಮೀನು ತಿಂತಾರೆ ಕಣ್ರೀ....''

''ತಿನ್ನಲಿ ಬಿಡೆ, ಕುರಿ, ಕೋಳಿ, ಇಲಿ, ಹೆಗ್ಗಣ ಏನು ಬೇಕಾದ್ರೂ ತಿನ್ನಲಿ, ಮಗಂಗೆ ಎರಡು ಲಕ್ಷ, ಸೊಸೆಗೆ ಎರಡು ಲಕ್ಷ, ಯಾರಿಗುಂಟು ಯಾರಿಗಿಲ್ಲ, ತಿಂಗಳಿಗೆ ನಾಕು ಲಕ್ಷ, ಸಾಕು ಬಿಡೇ ಆರಾಮಾಗಿ ಇರಬಹುದು, My Son is realy great, ಜಾತಿಕೆಟ್ರೂ ಸುಖ ಇರಬೇಕು. ನಾಕು ಲಕ್ಷ, ನಾಕು ಲಕ್ಷ....'' ಹುಚ್ಚು ಬಡಿದವನಂತೆ ಬಡಬಡಿಸಿದೆ.

''ಸಾಕು ಸಾಕು ನಿಮ್ಮ ಬಡಬಡಿಕೆ.''

''ಹೇಗೆ ನಿಲ್ಲಿಸಲೇ, ತಿಂಗಳಿಗೆ ನಾಲ್ಕು ಲಕ್ಷ ಅಂದ್ರೆ ವರ್ಷಕ್ಕೆ ಅರ್ಧ ಕೋಟಿ...''

''ಹುಡುಗಿ ಬಂಗಾಳದವಳು ರೀ... ಜಾತಿ ಬಿಟ್ಟು ಜಾತಿ ಆಗೊಲ್ಲವೇನ್ರೀ...''

"ಐ ಡೋಂಟ್ ಕೇರ್ ಮೈ ಜಾತಿ.... ನನಗೆ ಏನು ಮಾಡಬೇಕೂಂತ್ಲೆ ತೋಚ್ತಿಲ್ಲ" ಹುಚ್ಚುಹಿಡಿದವನಂತೆ ಕೂಗಿದೆ.

"ನಿಮಗೆ ಏನು ತೋಚುತ್ತೆ... ಹೋಗಿ ಚಾಮರಾಜಪೇಟೆಗೆ ಅಪ್ಪಣ್ಣ ಶಾಸ್ತ್ರಿ ಮನೆಗೆ .... ನಡೆದೇ ಹೋಗ್ಲಿ ಮದ್ವೆ" ಒಪ್ಪಿಗೆ ಕೊಟ್ಟಳು.

"ವೆರಿಗುಡ್ ಈಗಿಂದೀಗ್ಲೆ ಹೋಗ್ತೀನಿ.. ಮದ್ವೆಗೆ ತಾರೀಖು ಗೊತ್ತು ಮಾಡ್ಕೊಂಡೇ ಬರ್ತೀನಿ..." ಎದ್ದು ಪಂಚೆ ಬಿಚ್ಚಿ ಪ್ಯಾಂಟು ಏರಿಸಿದೆ.

"ತಡೀರಿ... ಬಿಪಿ ಹೆಚ್ಚು ಮಾಡ್ಕೊಬೇಡಿ ಕೂತ್ಕೊಳ್ಳೀ... ಒಂದು ಲೋಟ ಕಾಫಿ ಕೊಡ್ತೀನಿ.." ಅಂದು ರಿಮೋಟ್ ಕೈಗೆ ಕೊಟ್ಟಳು, ಇವಳು ಒಳಗೆ ಹೋದಳು ನಾನು ಟಿ.ವಿ. ಹಚ್ಚಿದೆ.

ಈಗ ಹೊರಗೆ ಗೇಟು ಕಟಕಟಾಯಿಸಿತು. ನೋಡಿದೆ. ಸಾಕ್ಷಾತ್ ಅಪ್ಪಣ್ಣ ಶಾಸ್ತ್ರಿಗಳು, ಗೇಟು ತೆಗೆದುಕೊಂಡು ದನ ನುಗ್ಗಿದ ಹಾಗೆ ಒಳಗೆ ನುಗ್ಗಿದರು.

"ಲೇ... ಲಲಿತೂ... ಬೇಗಬಾರೇ..."

"ಏನೂ... ನೀರು ಬಂತೇ..."

"ಅಲ್ಲಾ.. ಅಪ್ಪಣ್ಣ ಶಾಸ್ತ್ರಿಗಳು ಬರ್ತಿದ್ದಾರೆ.. ಯಾವಾಗ್ಲೂ ನೀರೂ... ನೀರೂ... ನೀರೂ..."

"ಹೌದೇ..." ಇವಳು ಸೊಂಟಕ್ಕೆ ಸೀರೆ ಸಿಕ್ಕಿಸುತ್ತಾ ಬಂದಳು. ಅಪ್ಪಣ್ಣ ಶಾಸ್ತ್ರಿಗಳು ಸೋಫಾಮೇಲೆ ಮಂಡಿಸಿದರು.

"ನೆನದವರ ಮನದಲ್ಲಿ ಅನ್ನೊ ಹಾಗೆ.. ಇವರು ನಿಮ್ಮ ಮನೆಗೆ ಹೊರಟಿದ್ರು... ನೀವೇ ಇಲ್ಲಿಗೆ ಬಂದ್ರೀ..." ಇವಳು.

"ನಾನು ಮುಂದಿನ ಕ್ರಾಸ್‌ನ ಸರೋಜಮ್ಮನ ಯಜಮಾನರ ವೈಕುಂಟ ಸಮಾರಾಧನೆಗೆ ಪಟ್ಟಿ ಕೊಡೋಕೆ ಹೋಗಿದ್ದೆ.. ಹಾಗೆ ನಿಮ್ಮ ಮನೆ ಹೊಕ್ಕು ಹೋಗೋಣ ಅನ್ನಿಸ್ತು ಬಂದೆ..." ಅಂದ್ಹಾಗೆ ಏನೂ ನನ್ನನ್ನ ಹುಡ್ಕೊಂಡು ಹೊರಟಿದ್ದೂ..." ಶಾಸ್ತ್ರಿಗಳು.

"ನೋಡೀ..." ನಾನು ಬಾಯಿ ತೆರೆದೆ.

"ನೋಡೀ.. ನೀವು ಆ...... ಅನ್ಕಂಡು ವಿಷಯ ಹೇಳಿ ಮುಗಿಸೋ ಅಷ್ಟರಲ್ಲಿ ನಂ ಶಶಾಂಕ ಬಂದೇ ಬಿಡ್ತಾನೆ ಅಷ್ಟೆ"

"ಏನೂ.... ಶಶಾಂಕ ಅಮೇರಿಕ ಇಂದ ಬರ್ತಿದಾನ್ಯೇ ಅವನಿಗೆ ಒಂದು ಒಳ್ಳೆ ಸತ್(ದ್) ಸಂಪ್ರದಾಯದ ಹುಡುಗೀನ ನೋಡಿದೀನಿ... ಬಂದ ತಕ್ಷಣ ಒಂದು ಮೂಗುದಾರ ಹಾಕಿಬಿಡೋಣ... ಏನಂತೀರಿ..." ಶಾಸ್ತ್ರಿಗಳು.

"ಅಯ್ಯೋ ಈಗಿನ ಕಾಲದ ಹುಡುಗರು ನಮಗೆ ಮೂಗುದಾರ ಹಾಕ್ತಾರೆ... ನಮಗೆ ಹುಡುಗೀನ ಹುಡುಕೋಕೆ ಎಲ್ಲಿ ಬಿಡ್ತಾರೆ... ಅವ್ನೆ ಒಂದು ಬಂಗಾಳಿ ಹುಡುಗಿನ ನೋಡ್ಕೊಂಡಿದ್ದಾನೆ. ತಿಂಗಳಿಗೆ ಎರಡು ಲಕ್ಷ ಸಂಬ್ಳ. ಮುಂದಿನ ತಿಂಗಳು ಬರ್ತಾನಂತೆ. ನಾವು ಅವ್ನಿಗೆ ಲಗ್ನ ಮಾಡಬೇಕು ಅಷ್ಟೆ" ನಾನು ಹೇಳಿದೆ.

"ಏನೂ.... ಹುಡುಗಿಗೆ ಎರಡು ಲಕ್ಷ ಸಂಬ್ಳವೇ ಹಾಗಾದ್ರೆ ಜಾತ್ಕಪಾತ್ಕ ಏನೂ ಬೇಡಾ.... ಅವರು ಜಾತ್ಕ ತಂದ್ರೆ ನಾನೇ ಕೂಡಿಸಿ ಕೊಡ್ತೀನಿ... ಅವಕಾಶ ಕಳ್ಕೊಬೇಡಿ. ತಡೀರಿ – ಅಂದು ಚೀಲ ದೊಳಗಿನಿಂದ ಪಂಚಾಂಗ ತೆಗೆದು, ನಾಲ್ಕು ಬಾರಿ ಬೆರಳು ಮಡಚಿ, ಡಿಸೆಂಬರ್ 26ಕ್ಕೆ ಒಳ್ಳೆ ಲಗ್ನ ಇದೆ. ಗಂಡ ಹೆಂಡ್ತಿ ಸೊಗಸಾಗಿ ಇರ್‍ತಾರೆ' ಶಾಸ್ತ್ರಿಗಳು ನುಡಿದರು.

"ಅಯ್ಯೋ ಡಿಸೆಂಬರ್ 26 ನಾನು ಮದ್ವೆ ಆದ ದಿನ' ಇವಳು ಅಂದಳು ಖುಷಿಯಿಂದ.

"ಆ ತಾರೀಖು ಬೇಡ ಇನ್ನೊಂದು ತಾರೀಖು ಹೇಳೀ" ನಾನು.

"ಅಯ್ಯೋ ಅದೇ ದಿನ ಇರಲಿ, ಹೆಂಡತಿ ಹೇಳಿದ ಹಾಗೆ ಗಂಡ ಕೇಳ್ಕೊಂಡು ನೆಮ್ಮದಿ ಇಂದ ಸಂಸಾರ ನಿಭಾಯಿಸ್ತಾನೆ..." ಇವಳು.

ಈಗ ರೂಲಿಂಗ್ ಆಯಿತು, ಬಂಗಾಳಿ ಹುಡುಗಿ ತಂದೆ ಭಟ್ಟಾಚಾರ್ಯರೊಡನೆ ಮಾತಾಡಿದ್ದು ಆಯಿತು, ಹುಡುಗಿ ಅಪ್ಪ ಅಸ್ತು ಅಂದ್ರು, ಎರಡೂ ಖರ್ಚು ಹಾಕಿ ಭರ್ಜರಿ ಯಾಗಿ ನಾನೇ ಲಗ್ನ ಹೊಡೆಸಿದೆ. ಬೀಗರು ನನ್ನ ಮನೆಯಲ್ಲೇ ಉಳಿದರು.

ಹುಡುಗ ಹುಡುಗಿ ಮಧುಚಂದ್ರ ಮುಗಿಸಿ ಬಂದ್ರೂ, ಬಂಗಾಳಿ ಬೀಗರು ಮನೆ ಇಂದ ಹೊರಟಿಲ್ಲ, ಬೀಗರು ಬಂಗಾಳದವರು, ಮನೆಯಲ್ಲೇ ಮೀನು ತಿನ್ನುತ್ತಾರೆ. ಅನ್ನೊಹಾಗಿಲ್ಲ ಅನುಭವಿಸೋ ಹಾಗಿಲ್ಲ, ತಿಂಗಳಾಯಿತು ಬೀಗರು ಮನೆ ಇಂದ ಹೊರಡುವ ಸೂಚನೆ ಕಾಣುತ್ತಿಲ್ಲ, ಈಗ ಹುಡುಗ ಹುಡುಗಿ ಕೆಲಸಕ್ಕೆ ಹೋದ ಮೇಲೆ, ಬೀಗರು ತಂಬಾಕು ಹಾಕುತ್ತಾರೆ. ಮನೆಗೋಡೆ ಮೇಲೆ ಪಿಚಕ್ಕನೆ ಉಗಿಯುತ್ತಾರೆ, ನನ್ನನ್ನ ನೋಡಿ ನಗುತ್ತಾರೆ.

"ಏನೇ.. ಈ ಬೀಗ್ರು ಹೋಗೋ ಲಕ್ಷಣವೇ ಕಾಣ್ತಿಲ್ಲಾ..." ಕೇಳಿದೆ.

"ನಾಕು ದಿನ ತಡ್ಕಳ್ರೀ..." ರೇಗಿದಳು.

ಇವಳೇ ಒಂದು ದಿನ ಮಗನನ್ನು ಕೇಳಿದಳು.

'ಏನೋ ಶಶಾಂಕ ಬೀಗ್ರು ಕಲ್ಕತ್ತೆಗೆ ಹೋಗೋಲ್ಲವೇ.. ಇವರಿಗೆ ಮಾಡಿ ಮಾಡಿ ನನಗಂತೂ ರೋಸಿ ಹೋಗಿದೆ.." ಮಗನ ಮುಂದೆ ತೋಡಿ ಕೊಂಡಳು.

"ಅಮ್ಮಾ... ಈಗ ಒಂದು ತಾಪತ್ರಯಕ್ಕೆ ಬಂದಿದೆ."

"ಏನೋ..." ನಾನು

"ನನ್ನ ಮಾವಂಗೆ ಐವತ್ತು ಲಕ್ಷ ಸಾಲ ಇದೆಯಂತೆ ಕಲ್ಕತ್ತೆಲಿ, ಅದನ್ನು ನಾನೇ ತೀರಿಸಬೇಕಂತೆ... ನನ್ನ ಹೆಂಡ್ತಿ ಹೇಳಿದಾಳೆ. ತೀರಿದ ತಕ್ಷಣ ಹೊರಟು ಬಿಡ್ತಾರಂತೆ."

"ಅಂದ್ರೆ..."

"ಈ ನನ್ನ ಮಾವ ಇಲ್ಲೇ ಇರ್‍ತಾರೆ." ಮಗ ನುಡಿದ.

ನಾನು "ಶ್ರೀರಾಮರಕ್ಷೆ" ಅಂತ ಕುಸಿದೆ...

# STATEMENT OF OWNERSHIP OF APARANJI (KANNADA MONTHLY) (SEE RULES AND FORM IV)

| | | | |
|---|---|---|---|
| 1. | Place of Publication | : | Bangalore |
| 2. | Periodicity of Publication | : | Monthly |
| 3. | Printer's Name | : | V.R. Nath |
| | Nationality | : | Indian |
| | Address | : | Ravi Graphics<br>49, 4th Cross. SSI Area<br>Rajaji Nagar<br>Bangalore -560010 |
| 4. | Publisher's Name | : | Koravanji Aparanji Trust |
| | Address | : | No 36, 6th Main Road<br>Malleswaram<br>Bangalore- 560003 |
| 5. | Editor's Name | : | M.ShivaKumar |
| | Nationality | : | Indian |
| | Address | : | 36, 6th Main Road<br>Malleswaram<br>Bangalore 560003 |
| 6. | Name and address of Individuals who own the Paper | | Koravanji Aparanji Trust<br>36, 6th Main Road<br>Malleswaram<br>Bangalore 560003 |

I M.Shivakumar hereby declare that the particulars given above are true to the best of my knowledge and belief.

1-3-2008
Bangalore

**M.ShivaKumar**
(Signature of the Publisher)

Mailing Date
5th of every month
Mailed at: Rajajinagar - PO

CPMG/KA/BGW-544/2006-2008
**RNI-KAR-KAN / 2005 / 15457**



**Printed by:** V.R. NATH for the Publisher KORAVANJI APARANJI TRUST, Published by KORAVANJI APARANJI TRUST, 36, 6th Main Road, Malleswaram, Bangalore - 560 003.
**Printed at:** Ravi Graphics, 53/8, 2nd Main Road, Industrial Town, Rajajinagar, Bangalore - 560 010. Ph : 2330 5999.
Editor : M. SHIVAKUMAR